ವಿಜಯಪುರ | ಸಂಪುಟ 04 | ಸಂಚಿಕೆ 063 | ಪುಟ 04 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com RNI NO: KARKAN/2023/86203 ಶನಿವಾರ, ಏಪ್ರಿಲ್, 25, 2026

"ಡಾ.ರಾಜಕುಮಾರ ಕನ್ನಡ ಚಿತ್ರರಂಗದ ಧೃವತಾರೆ. ಎಂತಹ ಪಾತ್ರಗಳನ್ನಾದರೂ ಲೀಲಾಜಾಲವಾಗಿ ಅಭಿನಯಿಸುವ ಮೇರುನಟರಾಗಿದ್ದರು. ಅವರ ಕನ್ನಡಾಭಿಮಾನ, ಸರಳ ಸಜ್ಜನ ವ್ಯಕ್ತಿತ್ವ ನಮಗೆಲ್ಲ ಮಾದರಿಯಾಗಬೇಕು."



■ ಅಮರೇಶ ದೊಡಮನಿ
ಸಹಾಯಕ ನಿರ್ದೇಶಕರು, ವಾರ್ತಾ ಇಲಾಖೆ ವಿಜಯಪುರ

# ಸೌಜನ್ಯಳ ಸಾಧನೆ ಎಲ್ಲ ಮಕ್ಕಳಿಗೂ ಪ್ರೇರಣೆಯಾಗಲಿ : ಬಬಲೇಶ್ವರ



■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿರುವ ಸೌಜನ್ಯ ಬಸವರಾಜ ಕಂದಕೂರ ಅವಳ ಸಾಧನೆ ಎಲ್ಲ ಮಕ್ಕಳಿಗೂ ಪ್ರೇರಣೆಯಾಗಲಿ, ಶ್ರೇಷ್ಠ ವೈದ್ಯಳಾಗಬೇಕೆನ್ನುವ ಅವಳ ಕನಸಿನ ಜೊತೆಗೆ ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ಯಶಸ್ಸನ್ನು ಪಡೆದು, ಐಎಎಸ್ ಅಧಿಕಾರಿಯಾಗಬೇಕೆನ್ನುವ ಅವಳ ಕನಸು ನನಸಾಗಲೆಂದು ಕರ್ನಾಟಕ ಬಾಲವಿಕಾಸ ಅಕಾಡೆಮಿಯ ನಿಕಟ ಪೂರ್ವ ಅಧ್ಯಕ್ಷರಾದ ಸಂಗಮೇಶ ಬಬಲೇಶ್ವರ ಹಾರೈಸಿದರು.

ಶುಕ್ರವಾರ ತಮ್ಮ ನಿವಾಸಕ್ಕೆ ಆಗಮಿಸಿದ್ದ ಸಾಧಕ ವಿದ್ಯಾರ್ಥಿನಿಯನ್ನು ಹಾಗೂ ಪಾಲಕರನ್ನು ಸನ್ಮಾನಿಸಿ ಅವರು ಶುಭ ಹಾರೈಸಿದರು.

ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಎಮ್ ಬಿ ಪಾಟೀಲರ ಮಾರ್ಗದರ್ಶನದಲ್ಲಿ, ಜಿಲ್ಲಾಧಿಕಾರಿಗಳು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,ಶಿಕ್ಷಣ ಇಲಾಖೆ ಉಪ ನಿರ್ದೇಶಕರು ಮತ್ತು ಅವರ ತಂಡ ಹಾಗೂ ಜಿಲ್ಲೆಯ ಎಲ್ಲ ಶಿಕ್ಷಕ ಬಂಧುಗಳ ಸಹಕಾರದಿಂದ ಫಲಿತಾಂಶದಲ್ಲಿ ಸುಧಾರಣೆ ಕಂಡಿರುವುದು ಸಂತೋಷದ ಸಂಗತಿಯಾಗಿದೆಯಾದರೂ ಬರುವ ಮುಂದಿನ ಶೈಕ್ಷಣಿಕ ವರ್ಷಕ್ಕೆ ವಿಜಯಪುರ ಜಿಲ್ಲೆಯ ಫಲಿತಾಂಶ ರಾಜ್ಯಕ್ಕೆ ಮೊದಲ ಜಿಲ್ಲೆಯಾಗಿ ನಿಲ್ಲುವಂತೆ ಎಲ್ಲರೂ ಸಾಂಘಿಕ ಪ್ರಯತ್ನ ಮಾಡಬೇಕು ಎಂದು ಹೇಳಿದರು. ರಾಜ್ಯದ ಸಾಧಕ ಮಕ್ಕಳೆಲ್ಲರನ್ನು ನಾನು ಅಭಿನಂದಿಸುತ್ತೇನೆ. ರಾಜ್ಯದಲ್ಲಿ ಎಸ್ ಎಸ್ ಎಲ್ ಸಿ ಯಲ್ಲಿ ಸಾಧನೆ ಮಾಡಿದ ಸಾಧಕ ಮಕ್ಕಳಿಗೆ ಕರ್ನಾಟಕ ಘನ ಸರ್ಕಾರ ಆಕರ್ಷಕ ಬಹುಮಾನಗಳನ್ನು ನೀಡಿ ಪ್ರೋತ್ಸಾಹಿಸಬೇಕು. ಆ ನಿಟ್ಟಿನಲ್ಲಿ ಶಿಕ್ಷಣ ಸಚಿವರಿಗೆ ಮಾನ್ಯ ಮುಖ್ಯಮಂತ್ರಿಗಳಿಗೆ ವಿನಂತಿಸಲಾಗುವುದು ಎಂದು ಅವರು ಹೇಳಿದರು.

ಇದೇ ಸಂದರ್ಭದಲ್ಲಿ ವಿದ್ಯಾರ್ಥಿನಿಯ ತಂದೆ ಆದರ್ಶ ಶಿಕ್ಷಕ ದಂಪತಿಗಳಾದ ಬಸವರಾಜ ಕಂದಕೂರ ಹಾಗೂ ಗಿರಿಜಾ ಕಂದುಕುರ್ ಅವರನ್ನು ಸಹ ಸನ್ಮಾನಿಸಿ ಅಭಿನಂದಿಸಿದರು.

# ನಟನೆಯಿಂದ ಜೀವನ ಮೌಲ್ಯಗಳನ್ನು ಬೋಧಿಸಿದ ಡಾ. ರಾಜಕುಮಾರ್





■ ಉದಯರಶ್ಮಿ ದಿನಪತ್ರಿಕೆ

## ವಿಜಯಪುರದಲ್ಲಿ ನಡೆದ ಡಾ.ರಾಜ್ ಕುಮಾರ ಜನ್ಮದಿನೋತ್ಸವ ಹಾಗೂ ಅವರ ಗೀತೆಗಳ ಗಾಯನ ಸಮಾರಂಭದಲ್ಲಿ ಅಪರ ಜಿಲ್ಲಾಧಿಕಾರಿ ಡಾ.ಔದ್ರಾಮ ಅಭಿಮತ

ವಿಜಯಪುರ: ನಟನೆಯ ಮೂಲಕ ಜೀವನ ಮೌಲ್ಯಗಳನ್ನು ಬೋಧಿಸಿದ ವರನಟ ಡಾ.ರಾಜಕುಮಾರ್ ಕನ್ನಡದ ಶ್ರೇಷ್ಠ ರತ್ನ ಎಂದು ಅಪರ ಜಿಲ್ಲಾಧಿಕಾರಿ ಡಾ.ಔದ್ರಾಮ ಹೇಳಿದರು.

ಜಿಲ್ಲಾಡಳಿತ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ನಗರದ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದಲ್ಲಿ ನಡೆದ ಡಾ.ರಾಜ್ ಕುಮಾರ ಜನ್ಮದಿನೋತ್ಸವ ಹಾಗೂ ಅವರ ಗೀತೆಗಳ ಗಾಯನ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಡಾ.ರಾಜಕುಮಾರ್ ಅವರು ತಮ್ಮ ಚಿತ್ರದ ಮೂಲಕ ಸಾಮಾಜಿಕ ಜಾಗೃತಿ ಸಂದೇಶ ಸಾರಿದರು, ಡಾ.ರಾಜಕುಮಾರ್ ಅವರ ಸರಳತೆ, ಶ್ರೇಷ್ಠತೆ ಎಲ್ಲ-ರಿಗೂ ಸ್ಫೂರ್ತಿ ಎಂದರು.

ಉಪನ್ಯಾಸ ಮಂಡಿಸಿದ ಕಾರ್ಯ ನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಅಶೋಕ ಯಡಹಳ್ಳಿ ಮಾತನಾಡಿ, ಹಿಂದಿ ಸೇರಿದಂತೆ ಅನೇಕ ಭಾಷೆಗಳಲ್ಲಿ ನಟಿಸುವ ಅವಕಾಶ ಬಂದು ಬಹುಭಾಷಾ ನಟರಾಗಿ ಮಿಂಚುವ ಅವಕಾಶ ಬಂದರೂ ಸಹ ಅದನ್ನು ನಿರಾಕರಿಸಿ ಕನ್ನಡ ಚಿತ್ರಗಳಲ್ಲಿ ಮಾತ್ರ ನಟಿಸುವೆ ಎಂಬ ಅವರ ನಿಲುವೇ ಅವರ ಕನ್ನಡಾಭಿಮಾನಕ್ಕೆ ದಿವ್ಯ ನಿದರ್ಶನ ಎಂದರು.

ಗೋಕಾಕ್ ಚಳವಳಿಗೆ ಒಂದು ಹೊಸ ಚೈತನ್ಯ ತುಂಬಿ ಅದರ ಯಶಸ್ವಿ ಹೋರಾಟದಲ್ಲಿಯೂ ಡಾ.ರಾಜ್ ಅವರ ಪಾತ್ರ ಅನನ್ಯ ಎಂದರು.

ಉಪನ್ಯಾಸ ಮಂಡಿಸಿದ ಪತ್ರಕರ್ತ ಪರಶುರಾಮ ಭಾಸಗಿ ಮಾತನಾಡಿ, ಡಾ.ರಾಜಕುಮಾರ್ ಅವರದ್ದು ಹೋಲಿಕೆಗೆ ನಿಲುಕದ ವ್ಯಕ್ತಿ, ಅವರಿಗೆ ಅವರೇ ಸಾಟಿ, ನಾವು ಒಳ್ಳೆಯವರನ್ನು ರಾಜಕುಮಾರ್ ಅವರಿಗೆ ಹೋಲಿಸುತ್ತೇವೆ, ಓರ್ವ ತಾಯಿ ತನ್ನ ಮಗನನ್ನು ನನ್ನ ಮಗ ರಾಜಕುಮಾರ್ ಇದ್ದಂತೆ ಇದ್ದಾನೆ ಎಂದು ಅಭಿಮಾನದಿಂದ ಹೇಳುವುದುಂಟು, ಅಭಿಮಾನಕ್ಕೆ ಹೋಲಿಕೆ ಡಾ.ರಾಜ್ ಆಗಿದ್ದಾರೆ ಹೊರತು ಅವರಿಗೆ ಹೋಲಿಕೆ ಪದಗಳಿಲ್ಲ, ಅವರದ್ದು ವರ್ಣನಾತೀತ ವ್ಯಕ್ತಿತ್ವ, ಅವರ ಬಣ್ಣಿಸಲು ಉಪಮೇಯಗಳೇ ಇಲ್ಲ ಎಂದರು.

ಕಾರ್ಯಕ್ರಮದಲ್ಲಿ ಮಹಾನಗರ ಪಾಲಿಕೆ ಉಪ ಆಯುಕ್ತ ಮಹಾವೀರ ಬೋರಣ್ಣವರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಂತೋಷ ಭೋವಿ, ಭೀಮರಾವ ಜಿಗಜಿಣಗಿ, ಸೋಮು ಕಲ್ಲೂರ, ಫಯಾಜ್ ಕಲಾದಗಿ, ಸುರೇಶ ಬಿಜಾಪೂರ, ಶರಣು ಸಬರದ ಮೊದಲಾದವರು ಉಪಸ್ಥಿತ-ರಿದ್ದರು.

ವಾರ್ತಾ ಇಲಾಖೆಯ ಸಹಾಯಕ ನಿರ್ದೇಶಕ ಅಮರೇಶ ದೊಡಮನಿ ಸ್ವಾಗತಿಸಿದರು. ವಿರೇಶ ವಾಲಿ ಪ್ರಾರ್ಥಿಸಿದರು. ವಿರೇಶ ವಾಲಿ ಹಾಗೂ ಮಂಜುಳಾ ಹಿಪ್ಪರಗಿ ನಾಡಗೀತೆ ಪ್ರಸ್ತುತ ಪಡಿಸಿದರು. ಸಂಗೀತಾ ಮಠಪತಿ ಕಾರ್ಯಕ್ರಮ ನಿರೂಪಿಸಿದರು.

**ಜನಮನಸೂರೆಗೊಂಡ ಕಲಾವಿದರ ಪ್ರದರ್ಶನ**

ಜಿಲ್ಲೆಯ ವಿವಿಧ ಭಾಗಗಳಿಂದ ಆಗಮಿಸಿದ ಸುಮಾರು 70ಕ್ಕೂ ಹೆಚ್ಚು ಜನ ಕಲಾವಿದರು ಡಾ.ರಾಜ್ ಕುಮಾರ ಹಾಡು ಹಾಗೂ ಸಂಭಾಷಣೆಗಳನ್ನು ಹೇಳುವ ಮೂಲಕ ಜನಮನಸೂರೆಗೊಂಡರು. ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲಾ ಕಲಾವಿದರಿಗೆ ಪ್ರಮಾಣ ಪತ್ರ ನೀಡಲಾಯಿತು.

ಬೆಳಿಗ್ಗೆ 9 ಗಂಟೆಯಿಂದ ಆರಂಭವಾದ ಕಾರ್ಯಕ್ರಮಕ್ಕೆ ಜಿಲ್ಲೆಯ ಕಲಾವಿದರಿಂದ ಸ್ಪಂದನೆ ಅದ್ಭುತವಾಗಿತ್ತು..



"ಡಾ.ರಾಜಕುಮಾರ ಕನ್ನಡ ಚಿತ್ರರಂಗದ ಧೃವತಾರೆ. ಎಂತಹ ಪಾತ್ರಗಳನ್ನಾದರೂ ಲೀಲಾಜಾಲವಾಗಿ ಅಭಿನಯಿಸುವ ಮೇರುನಟರಾಗಿದ್ದರು. ಅವರ ಕನ್ನಡಾಭಿಮಾನ, ಸರಳ ಸಜ್ಜನ ವ್ಯಕ್ತಿತ್ವ ನಮಗೆಲ್ಲ ಮಾದರಿಯಾಗಬೇಕು."

■ ಅಮರೇಶ ದೊಡಮನಿ
ವಾರ್ತಾ ಇಲಾಖೆಯ ಸಹಾಯಕ ನಿರ್ದೇಶಕರು

# ಉದ್ಯಮಿ ಹತ್ಯೆ ಪ್ರಕರಣ ಭೇದಿಸಿದ ಪೋಲೀಸರು : 6 ಆರೋಪಿಗಳ ಸೆರೆ



■ ಉದಯರಶ್ಮಿ ದಿನಪತ್ರಿಕೆ

## ತನಿಖಾ ತಂಡದ ಅಧಿಕಾರಿಗಳ ಕಾರ್ಯಕ್ಷಮತೆ ಶ್ಲಾಘಿಸಿದ ಜಿಲ್ಲಾ ಪೋಲಿಸ್ ಅಧಿಕ್ಷಕ ಲಕ್ಷ್ಮಣ ನಿಂಬರಗಿ

ವಿಜಯಪುರ: ನಗರ ಸಮೀಪದ ಅಲಿಯಾಬಾದ್ ಇಂಡಸ್ಟ್ರಿಯಲ್ ಪ್ರದೇಶದಲ್ಲಿ ನಡೆದ ಭೀಕರ ಹತ್ಯೆ ಪ್ರಕರಣವನ್ನು ವಿಜಯಪುರ ಗ್ರಾಮೀಣ ಪೊಲೀಸರು ಅತಿ ಕಡಿಮೆ ಅವಧಿಯಲ್ಲಿ ಭೇದಿಸಿ 6 ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ಜಿಲ್ಲಾ ಪೊಲೀಸ್ ಅಧಿಕ್ಷಕರಾದ ಲಕ್ಷ್ಮಣ ನಿಂಬರಗಿ ತಿಳಿಸಿದರು

ಶುಕ್ರವಾರ ಪತ್ರಿಕಾಗೋಷ್ಠಿ ನಡೆಸಿದ ಮಾತನಾಡಿದ ಅವರು, ದಿನಾಂಕ 14.04.2026 ರಂದು ಮಧ್ಯಾಹ್ನ ಸುಮಾರು 3 ಗಂಟೆಗೆ, ಗೊಡಂದೊಡ್ಡಿ ನಿವಾಸಿ ಹಾಗೂ ರಿಯಲ್ ಎಸ್ಟೇಟ್ ಉದ್ಯಮಿ ರಾಜು ತಂ. ಬಾಪು ಖರೆ (42) ಅವರು ತಮ್ಮ ಥಾರ್ ಕಾರಿನಲ್ಲಿ ವಿಜಯಪುರದತ್ತ ಬರುತ್ತಿದ್ದ ವೇಳೆ, ಅಲಿಯಾಬಾದ್ ಇಂಡಸ್ಟ್ರಿಯಲ್ ಏರಿಯಾದ ಧರಿದೇವರ ಪೇಟೆ ಸಮೀಪ ಟಿಪ್ಪರ್ ವಾಹನ ಡಿಕ್ಕಿ ಹೊಡೆದಿತ್ತು. ಅದೇ ಸಮಯದಲ್ಲಿ ಎರಡು ಬೈಕ್‌ಗಳಲ್ಲಿ ಬಂದ ಆರೋಪಿತರು ಕಾರನ್ನು ಅಡ್ಡಗಟ್ಟಿ, ಕಲ್ಲಿನಿಂದ ಹಲ್ಲೆ ನಡೆಸಿ ಬಳಿಕ ಪಿಸ್ತೂಲ್‌ನಿಂದ ಗುಂಡು ಹಾರಿಸಿ ರಾಜು ಖರೆ ಅವರನ್ನು ಕಾರಿನಲ್ಲಿಯೇ ಹತ್ಯೆ ಮಾಡಿದ್ದರು. ಈ ಕುರಿತು ಮೃತರ ಅಣ್ಣ ಸುಜೀರ ಬಾಪು ಖರೆ ನೀಡಿದ ದೂರಿನ ಮೇರೆಗೆ ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಪ್ರಕರಣದ ಗಂಭೀರತೆಯನ್ನು ಮನಗಂಡು, ಹೆಚ್ಚುವರಿ ಪೊಲೀಸ್ ಅಧೀಕ್ಷಕ ರಾಮನಗೌಡ ಹಟ್ಟಿ ಅವರ ಮೇಲ್ವಿಚಾರಣೆಯಲ್ಲಿ ಇಶಿತಾ ಗುಪ್ತಾ (ಐಪಿಎಸ್ ಪ್ರೊಬೇಷನರ್), ಡಿಎಸ್ಪಿ ಟಿ.ಎಸ್. ಸುಲ್ಪಿ, ಪಿಐ ಆರ್.ಎಸ್. ಜಾನರ, ಪಿಎಸ್‌ಐ ವಿನೋದ ದೊಡಮನಿ, ಲಕ್ಷ್ಮೀ ದೇಗಿನಾಳ ಹಾಗೂ ಸಿಬ್ಬಂದಿಗಳನ್ನೊಳಗೊಂಡ ಎರಡು ವಿಶೇಷ ತನಿಖಾ ತಂಡಗಳನ್ನು ರಚಿಸಲಾಗಿತ್ತು.

ತನಿಖೆಯ ವೇಳೆ ದೊರೆತ ಸುಳಿವುಗಳ ಆಧಾರದ ಮೇಲೆ ಆರೋಪಿತರನ್ನು ಪತ್ತೆ ಹಚ್ಚಲಾಗಿದ್ದು, ಬಂಧಿತರಾದವರು: ಅಬುಶ್ಯಾ ಸೋಪಾನ್ ಕೊಡ್ಲೇಕರ (36), ಅಬಾಶ್ಯಾ ಬಾಳು ಮಾನೆ (35), ವಾಗೀಶ ಶಂಕರ ಪೋಳ (31), ಜಾಲಿಂದರ್ ಅಲಿಯಾಸ್ ಪೋಪಟ್ ಹಕ್ಕೆ (29), ಖಂಡೂಬಾ ಅಲಿಯಾಸ್ ಅಜೀತ್ ತಾಂಬೆ (29) ಹಾಗೂ ಮುರಗು ಅಲಿಯಾಸ್ ಮರಗು ಹಕ್ಕೆ (24) ಎಂದು ಗುರುತಿಸಲಾಗಿದ್ದು

ಆಸ್ತಿ ವಿವಾದದ ಹಿನ್ನೆಲೆ ಆರೋಪಿಗಳು ಕೊಲೆ ಮಾಡಲು ಪೂರ್ವ ಯೋಜನೆ ರೂಪಿಸಿ, ಟಿಪ್ಪರ್ ವಾಹನದ ಮೂಲಕ ಕಾರಿಗೆ ಡಿಕ್ಕಿ ಹೊಡೆಸಿ ಬಳಿಕ ಗುಂಡು ಹಾರಿಸಿ ಹತ್ಯೆ ನಡೆಸಿರುವುದು ತನಿಖೆಯಲ್ಲಿ ಬಹಿರಂಗವಾಗಿದೆ ಎಂದು ತಿಳಿಸಿದರು , ಇನ್ನು ಘಟನೆ ಬಳಿಕ ಆರೋಪಿಗಳು ಬೈಕ್‌ಗಳನ್ನು ತಿಕೋಟಾ ತಾಲೂಕಿನ ಟಕ್ಕಳಕಿ ಹಾಗೂ ಸೋಲಾಪುರ ರೈಲು ನಿಲ್ದಾಣದಲ್ಲಿ ಬಿಟ್ಟು ಪರಾರಿಯಾಗಿದ್ದರು.

ಬಂಧಿತರಿಂದ 2 ಅಕ್ರಮ ಕಂಟ್ರಿ ಪಿಸ್ತೂಲ್‌ಗಳು, 7 ಮೊಬೈಲ್‌ಗಳು, 2 ಮೋಟಾರ್ ಸೈಕಲ್‌ಗಳು, 1 ಟಿಪ್ಪರ್ ಹಾಗೂ 1 ಕಾರನ್ನು ವಶಪಡಿಸಿಕೊಳ್ಳಲಾಗಿದೆ.

ಆರೋಪಿಗಳನ್ನು ಏಪ್ರಿಲ್ 20 ರಂದು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದ್ದು, ಮುಂದಿನ ತನಿಖೆ ಮುಂದುವರೆದಿದೆ.

ಈ ಪ್ರಕರಣವನ್ನು ತ್ವರಿತವಾಗಿ ಭೇದಿಸಿದ ತನಿಖಾ ತಂಡದ ಕಾರ್ಯಕ್ಷಮತೆಯನ್ನು ಹಿರಿಯ ಪೊಲೀಸ್ ಅಧಿಕಾರಿಗಳು ಶ್ಲಾಘಿಸಿದ್ದಾರೆ.

# ವಿಜಯಪುರ ಪೋಲೀಸರ ಭರ್ಜರಿ ಬೇಟೆ! : ರೂ. 1.60 ಕೋಟಿ ಮೌಲ್ಯದ ವಸ್ತುಗಳ ವಶ

## ವಿಜಯಪುರ ನಗರದಲ್ಲಿ ಹಲವಾರು ಕಳ್ಳತನ ಪ್ರಕರಣಗಳ ಭೇದನೆ | ವಿಜಯಪುರ ಜಿಲ್ಲಾ ಪೋಲಿಸ್ ಅಧಿಕ್ಷಕ ಲಕ್ಷ್ಮಣ ನಿಂಬರಗಿ ವಿವರಣೆ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ ನಗರದ ಉಪ-ವಿಭಾಗದ ವಿವಿಧ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ನಡೆದ ಕಳ್ಳತನ ಪ್ರಕರಣಗಳನ್ನು ಭೇದಿಸುವಲ್ಲಿ ವಿಜಯಪುರ ಪೊಲೀಸರು ಮಹತ್ವದ ಯಶಸ್ಸು ಸಾಧಿಸಿದ್ದಾರೆ ಎಂದು ವಿಜಯಪುರ ಜಿಲ್ಲೆಯ ಪೊಲೀಸ್ ಅಧಿಕ್ಷಕರಾದ ಲಕ್ಷ್ಮಣ ನಿಂಬರಗಿ ತಿಳಿಸಿದರು.

ಶುಕ್ರವಾರ ಪೊಲೀಸ್ ಸಮುದಾಯ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಮನಗೌಡ ಹಟ್ಟಿ, ಹೆಚ್ಚುವರಿ ಪೊಲೀಸ್ ಅಧೀಕ್ಷಕರು ಹಾಗೂ ಡಿಎಸ್ಪಿ ನಾಗರಾಜ್ ಜಿ ಅವರ ಮಾರ್ಗದರ್ಶನದಲ್ಲಿ.

ಗೋಲಗುಂಬಜ್ ವೃತ್ತದ ಸಿಪಿಐ ಎಸ್.ಎಸ್. ಬಳಿಗಾರ ಹಾಗೂ ಗಾಂಧಿಚೌಕ ಠಾಣೆಯ ಪಿಐ ಪ್ರದೀಪ ತಳಕೇರಿ ಅವರ ನೇತೃತ್ವದಲ್ಲಿ ಗಾಂಧಿಚೌಕ, ಗೋಲಗುಂಬಜ್, ಎಪಿಎಮ್ಸಿ, ಆದರ್ಶನಗರ ಮತ್ತು ಜಲನಗರ ಠಾಣೆಗಳ ಪಿಎಸ್‌ಐ ಹಾಗೂ ಸಿಬ್ಬಂದಿಗಳನ್ನೊಳಗೊಂಡ ವಿಶೇಷ ತನಿಖಾ ತಂಡಗಳನ್ನು ರಚಿಸಲಾಗಿ-ತ್ತು. ತಂಡಗಳು ತ್ವರಿತ ಕಾರ್ಯಾಚರಣೆ ನಡೆಸಿ ಹಲವಾರು ಆರೋಪಿಗಳನ್ನು ಬಂಧಿಸಿ, ಕಳ್ಳತನವಾದ ವಸ್ತುಗಳನ್ನು ವಶಪಡಿಸಿಕೊಂಡಿವೆ ಎಂದರು.

ಗಾಂಧಿಚೌಕ ಠಾಣೆ:

2026ರಲ್ಲಿ ದಾಖಲಾಗಿದ್ದ 7 ಪ್ರಕರಣಗಳಲ್ಲಿ 6 ಆರೋಪಿಗಳನ್ನು ಬಂಧಿಸಲಾಗಿದೆ. ಆರೋಪಿತರಿಂದ 70 ಗ್ರಾಂ ಬಂಗಾರದ ಆಭರಣಗಳು (ರೂ. 10.50 ಲಕ್ಷ), 18 ದ್ವಿಚಕ್ರ ವಾಹನಗಳು (ರೂ. 15.42 ಲಕ್ಷ), ರೂ. 1.10 ಲಕ್ಷ ನಗದು, ಲ್ಯಾಪ್‌ಟಾಪ್ ಮತ್ತು ಮೊಬೈಲ್ ಸೇರಿ ಒಟ್ಟು ರೂ. 27.25 ಲಕ್ಷ ಮೌಲ್ಯದ ವಸ್ತುಗಳನ್ನು ವಶಪಡಿಸಲಾಗಿದೆ.

ಗೋಲಗುಂಬಜ್ ಠಾಣೆ:

2025ರ 6 ಪ್ರಕರಣಗಳಲ್ಲಿ 6 ಆರೋಪಿಗಳು ಮತ್ತು 2026ರ 1 ಪ್ರಕರಣದಲ್ಲಿ 2 ಆರೋಪಿಗಳನ್ನು ಬಂಧಿಸಲಾಗಿದೆ. 100 ಗ್ರಾಂ 60 ಗುಂಜಿ ಬಂಗಾರ (ರೂ. 15 ಲಕ್ಷ), ಬೆಳ್ಳಿ ಕೈಖಡಗ, ಇನ್ನೋವಾ ಕ್ರೀಸ್ಟಾ ಕಾರು ಸೇರಿ ರೂ. 33.02 ಲಕ್ಷ ಮೌಲ್ಯದ ವಸ್ತುಗಳನ್ನು ವಶಪಡಿಸಲಾಗಿದೆ..

ಎ.ಪಿ.ಎಮ್ ಸಿ.ಠಾಣೆ:

2026ರ 2 ಪ್ರಕರಣಗಳಲ್ಲಿ 3 ಆರೋಪಿಗಳನ್ನು ಬಂಧಿಸಿ, 90 ಗ್ರಾಂ ಬಂಗಾರ (ರೂ. 14.40 ಲಕ್ಷ) ಮತ್ತು ಟೆರೆನೋ ಪ್ಲಸ್ ಕಾರು (ರೂ. 4.80 ಲಕ್ಷ) ಸೇರಿ ರೂ. 19.20 ಲಕ್ಷ ಮೌಲ್ಯದ ವಸ್ತುಗಳನ್ನು ವಶಪಡಿಸಲಾಗಿದೆ.

ಆದರ್ಶನಗರ ಠಾಣೆ:

2025ರ 10 ಪ್ರಕರಣಗಳಲ್ಲಿ 21 ಆರೋಪಿಗಳನ್ನು ಬಂಧಿಸಿ, 410 ಗ್ರಾಂ ಬಂಗಾರ (ರೂ. 61.50 ಲಕ್ಷ), ದ್ವಿಚಕ್ರ ವಾಹನಗಳು, ಹುಂಡೈ ಕಾರು ಹಾಗೂ ಇತರೆ ವಸ್ತುಗಳು ಸೇರಿ ಒಟ್ಟು ರೂ. 74.55 ಲಕ್ಷ ಮೌಲ್ಯದ ವಸ್ತುಗಳನ್ನು ವಶಪಡಿಸಲಾಗಿದೆ.

ಜಲನಗರ ಠಾಣೆ:

2025ರ 1 ಪ್ರಕರಣದಲ್ಲಿ 1 ಆರೋಪಿಯನ್ನೂ, 2026ರ 3 ಪ್ರಕರಣಗಳಲ್ಲಿ 4 ಆರೋಪಿಗಳನ್ನು ಬಂಧಿಸಲಾಗಿದೆ. 10 ಗ್ರಾಂ ಬಂಗಾರ, 250 ಗ್ರಾಂ ಬೆಳ್ಳಿ ಹಾಗೂ 7 ದ್ವಿಚಕ್ರ ವಾಹನಗಳು ಸೇರಿ ರೂ. 6.30 ಲಕ್ಷ ಮೌಲ್ಯದ ವಸ್ತುಗಳನ್ನು ವಶಪಡಿಸಲಾಗಿದೆ.

ಒಟ್ಟಾರೆ, 2025ರ 17 ಪ್ರಕರಣಗಳಲ್ಲಿ 28 ಆರೋಪಿಗಳು ಹಾಗೂ 2026ರ 13 ಪ್ರಕರಣಗಳಲ್ಲಿ 15 ಆರೋಪಿಗಳನ್ನು ಬಂಧಿಸಲಾಗಿದ್ದು, ಒಟ್ಟು ರೂ. 1,60,32,000 ಮೌಲ್ಯದ ಬಂಗಾರ, ಬೆಳ್ಳಿ, ನಗದು ಮತ್ತು ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ.

ಈ ಕಾರ್ಯಾಚರಣೆಯಲ್ಲಿ ತೊಡಗಿದ್ದ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿಯ ಸೇವೆಯನ್ನು ಜಿಲ್ಲಾ ಪೊಲೀಸ್ ಅಧೀಕ್ಷಕರು ಶ್ಲಾಘಿಸಿದ್ದಾರೆ.

# ಸಾಧಕ ವಿದ್ಯಾರ್ಥಿಗಳಿಗೆ ಸನ್ಮಾನಿಸಿದ ಶಾಸಕ ಲಕ್ಷ್ಮಣ ಸವದಿ


■ ಉದಯರಶ್ಮಿ ದಿನಪತ್ರಿಕೆ

ಅಥಣಿ: ಪ್ರಕಟವಾದ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶದಲ್ಲಿ ಅಥ-ಣಿ ತಾಲ್ಲೂಕಿನ ವಿದ್ಯಾರ್ಥಿಗಳು ರಾಜ್ಯಮಟ್ಟದಲ್ಲಿ ಅಸಾಧಾರಣ ಸಾಧನೆ ಮಾಡುವ ಮೂಲಕ ತಾಲ್ಲೂಕಿನ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ಈ ಹಿನ್ನೆಲೆಯಲ್ಲಿ, ಸಾಧಕ ವಿದ್ಯಾರ್ಥಿಗಳನ್ನು ಶಾಸಕ ಲಕ್ಷ್ಮಣ ಸವದಿ ಹಾಗೂ ಯುವ ನಾಯಕ ಚಿದಾನಂದ ಸವದಿ ಅವರು ತಮ್ಮ ಗೃಹ ಕಚೇ-ರಿಯಲ್ಲಿ ಆತ್ಮೀಯವಾಗಿ ಸನ್ಮಾನಿಸಿ ಗೌರವಿಸಿದರು.

ಕುಮಾರಿ ಪ್ರಾರ್ಥನಾ ನಾಗಪ್ಪ ಬಿರಾದರ ಪಾಟೀಲ ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಯ ಕಟಗೇರಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿಯಾದ ಈಕೆ 625ಕ್ಕೆ 625 ಅಂಕಗಳನ್ನು ಪಡೆಯುವ ಮೂಲಕ ರಾಜ್ಯಕ್ಕೆ ಪ್ರಥಮ ಸ್ಥಾನ ಅಲಂಕರಿಸಿದ್ದಾಳೆ.

ಕುಮಾರ ದಶರಥ ಶಿವಾಜಿ ಭೋಸಲೆ: ಐಗಳಿ ಗ್ರಾಮದ ಆದರ್ಶ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಯಾದ ಈತ 625ಕ್ಕೆ 624 ಅಂಕಗಳನ್ನು ಪಡೆಯುವ ಮೂಲಕ ರಾಜ್ಯಕ್ಕೆ ದ್ವಿತೀಯ ಸ್ಥಾನ ಪಡೆಯುವ ಮೂಲಕ ಈ ಇಬ್ಬರು ಮಕ್ಕಳು ರಾಜ್ಯ ಮಟ್ಟದಲ್ಲಿ ಗಮನ ಸೆಳೆದಿದ್ದಾರೆ.

ವಿದ್ಯಾರ್ಥಿಗಳನ್ನು ಸನ್ಮಾನಿಸಿ ಮಾತನಾಡಿದ ಶಾಸಕ ಲಕ್ಷ್ಮಣ ಸವದಿ, "ನಮ್ಮ ಅಥಣಿ ತಾಲ್ಲೂಕಿನ ಗ್ರಾಮೀಣ ಭಾಗದ ಪ್ರತಿಭೆಗಳು ಇಂದು ಇಡೀ ರಾಜ್ಯವೇ ನಮ್ಮತ್ತ ತಿರುಗಿ ನೋಡುವಂತಹ ಸಾಧನೆ ಮಾಡಿದ್ದಾರೆ. ಅದರಲ್ಲೂ ಸರ್ಕಾರಿ ಶಾಲೆಯ ವಿದ್ಯಾರ್ಥಿನಿ ಪ್ರಾಥ-ರ್ನಾ ರಾಜ್ಯಕ್ಕೇ ಪ್ರಥಮ ಸ್ಥಾನ ಪಡೆದಿರುವುದು ಮತ್ತು ದಶರಥ ದ್ವಿತೀಯ ಸ್ಥಾನ ಪಡೆದಿರುವುದು ನಮ್ಮ ಕ್ಷೇತ್ರಕ್ಕೆ ಸಂದ ದೊಡ್ಡ ಗೌರವವಾಗಿದೆ. ಇವರ ಶ್ರಮ, ಪೋಷಕರ ಬೆಂಬಲ ಹಾಗೂ ಶಿಕ್ಷಕರ ಮಾರ್ಗದರ್ಶನಕ್ಕೆ ಈ ಫಲಿತಾಂಶ ಹಿಡಿದ ಕನ್ನಡಿಯಾಗಿದೆ. ಈ ಯುವ ಪ್ರತಿಭೆಗಳು ಮುಂದಿನ ದಿನಗಳಲ್ಲಿ ಉನ್ನತ ಶಿಕ್ಷಣ ಪಡೆದು ದೇಶದ ಸತ್ಪ್ರಜೆಗಳಾಗಿ ಹೊರಹೊಮ್ಮಲಿ ಎಂದು ಹಾರೈಸಿದರು.



# ಮಕ್ಕಳಿಗೆ ಮೊಬೈಲ್ ಸಹವಾಸ ಬಿಡಿಸುವುದು ಹೇಗೆ?



■ ಉದಯರಶ್ಮಿ ದಿನಪತ್ರಿಕೆ

## ನಾವು - ನಮ್ಮ ಮಕ್ಕಳು

### (ಮಕ್ಕಳ ಪ್ರಗತಿಯಲ್ಲಿ ಪಾಲಕರ ಪಾತ್ರ ಕುರಿತು ಲೇಖನ ಮಾಲಿಕೆ)

ಎಲೆಕ್ಟ್ರಾನಿಕ್ ಉಪಕರಣಗಳನ್ನು ಬಳಸುವುದು ಇಂದು ನಿನ್ನೆಯ ಮಕ್ಕಳ ಹವ್ಯಾಸವಲ್ಲ. ದುಬಾರಿ ಬೆಲೆಯ ಗ್ರಾಮ ಫೋನ್ ಗಳು ಮೊಟ್ಟ ಮೊದಲಿಗೆ ಚಾಲ್ತಿಯಲ್ಲಿ ಬಂದವು. ಕಹಳೆಯಾಕಾರದ ಗ್ರಾಮಫೋನ್ ನ ಮೇಲೆ ತಟ್ಟೆಯ ಆಕಾರದ ಹಾಡಿನ ಪ್ಲೇಟುಗಳನ್ನು ಇರಿಸಿ ಅದರ ಮೇಲೆ ವಿದ್ಯುತ್ತಿನ ಕನೆಕ್ಷನ್ ಹೊಂದಿರುವ ಕಡ್ಡಿಯನ್ನು ಇಟ್ಟೊಡನೆ ಸುಮಧುರವಾದ ಗೀತೆಗಳು ಮೊಳಗುತ್ತಿದ್ದವು. ಈ ಮೊದಲೇ ರೆಕಾರ್ಡಿಂಗ್ ಸ್ಟುಡಿಯೋಗಳಲ್ಲಿ ಧ್ವನಿ ಮುದ್ರಿಸಲ್ಪಟ್ಟ ಗೀತೆಗಳು ಗ್ರಾಮಫೋನ್ ತಟ್ಟೆಗಳ ಮೂಲಕ ನಮ್ಮ ಶ್ರವಣೇಂದ್ರಿಯಗಳಿಗೆ ಅಮೃತ ಸುಧೆಯನ್ನು ಉಣಿಸುತ್ತಿದ್ದವು. ಸುಮಾರು ಶತಮಾನಗಳ ಇತಿಹಾಸ ಇವಕ್ಕಿದೆ.

ನಂತರ ಬಂದದ್ದು ರೇಡಿಯೋ.ಈ ಹಿಂದೆ ರೇಡಿಯೋ ತರಂಗಗಳ ಮೂಲಕ ಆಕಾಶವಾಣಿಯಲ್ಲಿ ನಮ್ಮ ಹಿರಿಯರು ಹಾಡು, ವಾರ್ತೆಗಳು, ಪ್ರದೇಶ ಸಮಾಚಾರ, ಹವಾಮಾನ ಮುನ್ಸೂಚನೆ, ಕೃಷಿ ಸಂಬಂಧಿತ ಸಲಹೆ ಸೂಚನೆಗಳು, ನಾಟಕ ಮಕ್ಕಳ ಕಾರ್ಯಕ್ರಮಗಳು, ಮನರಂಜನೆ ಮುಂತಾದ ಕಾರ್ಯಕ್ರಮಗಳನ್ನು ಕೇಳುತ್ತಿದ್ದರು. ಮತ್ತೆ ಕೆಲವು ಹಣ ಸಂದಾಯ ಮಾಡಿ ಕೇಳುವಂತಹ ರೇಡಿಯೋ ಕಾರ್ಯಕ್ರಮಗಳು ಕೂಡ ಇದ್ದವು.

ಆಮೇಲೆ ಬಂದದ್ದು ಫೋನ್ ಗಳು. ಮೊದಮೊದಲು ಕೇವಲ ಪೋಸ್ಟ್ ಆಫೀಸ್ನಲ್ಲಿ, ಉಳ್ಳವರ ಮನೆಗಳಲ್ಲಿ ಮಾತ್ರ ಇರುತ್ತಿದ್ದ ಫೋನ್ ಗಳು ತಮ್ಮ ಕರ್ಕ ಶ ಧ್ವನಿಯಿಂದ ಕರೆ ಮಾಡಿದ ಸೂಚನೆಯನ್ನು ನೀಡಿದರೆ ನಂತರ ವಿವಿಧ ರೀತಿಯ ರಿಂಗ್ ಟೋನ್ ಗಳು ಬಂದವು. ಕಾರ್ಡ ಲೆಸ್ ಫೋನುಗಳ ನಂತರ ಈಗ ಇಲ್ಲದೆ ಆಂಡ್ರಾಯ್ಡ್ ಮೊಬೈಲ್ಗಳದ್ದೇ ಕಾರು ಬಾರು. ಚಿಕ್ಕ ಮಕ್ಕಳಿಂದ ಹಿಡಿದು ಮುಪ್ಪಿನ ಮುದುಕರವರೆಗೆ ಎಲ್ಲರ ಕೈಯಲ್ಲೂ ಮೊಬೈಲ್ ರಾರಾಜಿಸುತ್ತಿದೆ.

ನಿರ್ಜೀವ ವಸ್ತುಗಳಾದ ವಾಚುಗಳು ಗಡಿಯಾರಗಳು, ರೇಡಿಯೋ, ಗ್ರಾಮ ಫೋನ್ ಮುಂತಾದ ವಸ್ತುಗಳು ನಮ್ಮಲ್ಲಿ ಸದಾ ಆಕರ್ಷಣೆಯನ್ನು ಹುಟ್ಟಿಸುತ್ತಿದ್ದವು. ಯಂತ್ರದ ತಂತ್ರಜ್ಞಾನವನ್ನು ಅರಿಯುವ ಮುಂಚೆಯೇ ನಾವು ಅವುಗಳ ಆಕರ್ಷಕ ವಿನ್ಯಾಸ, ಬಣ್ಣ ಮತ್ತು ಮೆರುಗುಗಳಿಗೆ ಮಾರುಹೋಗುತ್ತಿದ್ದೆವು.

ಗ್ರಾಮಫೋನ್, ರೇಡಿಯೋ, ಫೋನು, ಟಿವಿ,



ಬಣ್ಣದ ಟಿವಿ, ವಿ ಸಿ ಆರ್, ವಿಸಿಡಿ ಹೀಗೆ ಹಂತ ಹಂತವಾಗಿ ನಾವು ವಿವಿಧ ಬಗೆಯ ಗ್ಯಾಜೆಟ್ ಗಳ ಜೊತೆ ನಮ್ಮ ಸಂಬಂಧವನ್ನು ಉಳಿಸಿ ಬೆಳೆಸಿಕೊಂಡು ಹೋದೆವು. ಇದೀಗ ಓಟಿಟಿಗಳ ಯುಗ. ಹತ್ತು ಹಲವರು ಚಾನೆಲ್ ಗಳು ಸಾಮಾಜಿಕ ಜಾಲತಾಣಗಳು ನಮ್ಮನ್ನು ದಿನದ 24 ಗಂಟೆಯೂ ರಂಜಿಸಲು ಇವೆ. ಹಿರಿಯರೇ ಇವುಗಳ ಆಕರ್ಷಣೆಗೆ ಒಳಗಾಗಿದ್ದಾರೆ ಎಂದರೆ ಮಕ್ಕಳ ಪಾಡೇನು?

ಮಕ್ಕಳೂ ಅಷ್ಟೇ.. ಮೊಬೈಲ್ ಕುರಿತ ಮಕ್ಕಳ ಆಕರ್ಷಣೆ ಹೇಳತೀರದು. ಶಾಲೆಗೆ ಹೋಗುವ ಕೊನೆಯ ಘಳಿಗೆಯವರೆಗೂ ಮೊಬೈಲನ್ನು ಬಳಸುವ ಮಕ್ಕಳು ಶಾಲೆಯಿಂದ ಬಂದೊಡನೆ ತಂದೆ ತಾಯಿಗಳ ಕೈಕಾಲು ಬಿದ್ದಾದರೂ ಮೊಬೈಲ್ ಪಡೆದು ಅದನ್ನು ಬಳಸುತ್ತಾರೆ.

ಮೊಬೈಲ್ನ ಕುರಿತಾದ ಮಕ್ಕಳ ಈ ಆಕರ್ಷಣೆ ಒಂದು ಹಂತದವರೆಗೆ ಪರವಾಗಿಲ್ಲ ಎಂದೆನಿಸಿದರೂ "ಅತಿಯಾದರೆ ಅಮೃತವೂ ವಿಷ" ಎಂಬ ಮಾತಿನಂತೆ ಮಕ್ಕಳು ತಮ್ಮ ಜೀವನದ ಅತಿ ಮುಖ್ಯವಾದ ವಿದ್ಯಾರ್ಥಿ ಜೀವನದ ಶೈಕ್ಷಣಿಕ ವಿಷಯಗಳತ್ತ ನಿರ್ಲಕ್ಷ ತೋರುತ್ತಿದ್ದಾರೆ ಇದು ಅಪಾಯಕ್ಕೆ ದಾರಿ.

ಎರಡು ಗುಂಡು ಸೂಜಿಗಳನ್ನು ವಿರುದ್ಧ ದಿಕ್ಕಿನಲ್ಲಿ ಇಟ್ಟು ನಡುವೆ ಒಂದು ಆಯಸ್ಕಾಂತವನ್ನು ಇಟ್ಟಾಗ ಆ ಆಯಸ್ಕಾಂತದ ಮ್ಯಾಗ್ನೆಟಿಕ್ ಶಕ್ತಿಯು ಹೆಚ್ಚಿರುವ ಕಡೆ, ಗುಂಡುಸೂಜಿಯು ಬಂದು ಅದಕ್ಕೆ ಅಂಟಿಕೊಳ್ಳುತ್ತದೆ ಎಂಬುದನ್ನು ವೈಜ್ಞಾನಿಕವಾಗಿ ನಾವು ಗಮನಿಸುತ್ತೇವೆ. ಪ್ರಸ್ತುತ ಮಕ್ಕಳ ಬದುಕಿನಲ್ಲಿ ಮೊಬೈಲ್ ಒಂದು ಮ್ಯಾಗ್ನೆಟಿಕ್ ಶಕ್ತಿಯ ಕೇಂದ್ರದಂತೆ ಭಾಸವಾಗುತ್ತಿದ್ದು

ಮಕ್ಕಳು ಹೆಚ್ಚಾಗಿ ಮೊಬೈಲ್ ನೆಡೆ ಆಕರ್ಷಿತರಾಗುತ್ತಿದ್ದಾರೆ. ಇದಕ್ಕೆ ಕಾರಣ ಮಕ್ಕಳಲ್ಲಿ ಸೃಜನಶೀಲತೆಯ ಕೊರತೆ ಇಂದಿನ ಪಾಲಕರು ತಮ್ಮ ಮಕ್ಕಳ ಕುರಿತು ಅತಿಯಾದ ಕಾಳಜಿ ತೋರುತ್ತಿದ್ದಾರೆ ಮಕ್ಕಳು ಕೇವಲ ಓದು ಬರಹಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಶೈಕ್ಷಣಿಕವಾಗಿ ಮುಂದುವರೆಯಲಿ, ಒಳ್ಳೆಯ ಉದ್ಯೋಗ ಸ್ಥಾನಮಾನಗಳನ್ನು ಪಡೆಯಲಿ ಎಂಬ ಆಶಯವನ್ನು ಹೊಂದಿರುವ ಪಾಲಕರು ತಮ್ಮ ಮಕ್ಕಳನ್ನು ಸೃಜನಶೀಲ ಚಟುವಟಿಕೆಗಳಲ್ಲಿ, ಆಟೋಟಗಳಲ್ಲಿ ತೊಡಗಿಸದೆ ಇರುವುದು ಕೂಡ ಮಕ್ಕಳು ಮೊಬೈಲ್ ನೆಡೆ ಆಕರ್ಷಿತರಾಗಲು ಒಂದು ಕಾರಣವಾಗಿದೆ.

ಸದಾ ಚಟುವಟಿಕೆಯಿಂದ ಕಾರ್ಯನಿರ್ವಹಿಸುವ ಮಕ್ಕಳು ಒಂದೆಡೆ ಕುಳಿತುಕೊಳ್ಳಲು ಮೊಬೈಲ್ ಕಾರಣವಾಗಿದೆ ಆದರೆ ಸದಾ ಮನೆಯ ತುಂಬಾ ಓಡಾಡುತ್ತಾ ತಮ್ಮೆಲ್ಲ ಕೆಲಸ ಕಾರ್ಯಗಳನ್ನು ಮಾಡಿಕೊಳ್ಳುವ ಮಕ್ಕಳು ಆರೋಗ್ಯಪೂರ್ಣವಾದ ಹವ್ಯಾಸಗಳನ್ನು ಹೊಂದಿರುವ ಮಕ್ಕಳು ಮೊಬೈಲ್ ನ ಚಟಕ್ಕೆ ಬೀಳುವುದು ಕಡಿಮೆ.

ಕೇವಲ ಒಂದು ತಲೆಮಾರಿನ ಹಿಂದೆ ನಮ್ಮ ಪಾಲಕರು ನಮಗೆ ಅತಿಯಾದ ಶಿಸ್ತು ಕ್ರಮವನ್ನು ತೆಗೆದುಕೊಳ್ಳದೆ ಆಟೋಟಗಳಲ್ಲಿ, ಹೊಲ ಮನೆಯ ದೈಹಿಕ ಶ್ರಮದ ಕೆಲಸಗಳಲ್ಲಿ ಮತ್ತು ಕೌಟುಂಬಿಕ ಕೆಲಸ ಕಾರ್ಯಗಳಲ್ಲಿ ಕಡ್ಡಾಯವಾಗಿ ತೊಡಗಿಸಿಕೊಳ್ಳುವಂತೆ ನಮಗೆ ತರಬೇತಿ ನೀಡುತ್ತಿದ್ದರು. ಇದರ ಪರಿಣಾಮವಾಗಿ ನಮಗೆ ಕೆಲಸ ಕಾರ್ಯಗಳಲ್ಲಿ ಒಂದು ರೀತಿಯ ಶಿಸ್ತು ಮೈಗೂಡಿತ್ತು. ಆದರೆ ಬದಲಾದ ಕಾಲಘಟ್ಟದಲ್ಲಿನ ಮಕ್ಕಳು ಮನೆಯ ಯಾವ ಕೆಲಸ ಕಾರ್ಯಗಳನ್ನು ಮಾಡದೆ ಇರುವುದು ಇರುವ ಒಬ್ಬಿಬ್ಬರು ಮಕ್ಕಳು ತಮ್ಮ ಕೆಲಸಗಳಿಗಾಗಿ ಪಾಲಕರನ್ನು ಅವಲಂಬಿಸುವುದು ನಡೆದುಕೊಂಡು ಬರುತ್ತಿದೆ.

ಹಗರಿಬೊಮ್ಮನಹಳ್ಳಿಯ ಸುಭೋದ ಕಲಿಕಾ ಕೇಂದ್ರದಲ್ಲಿನ ಮಕ್ಕಳಿಗೆ ಅಲ್ಲಿನ ಶಿಕ್ಷಕಿ ಶ್ರೀಮತಿ ರಜನಿ ಯವರು ವಿವಿಧ ರೀತಿಯ ಕಲಿಕಾ ಚಟುವಟಿಕೆಗಳನ್ನು ನೀಡುವ ಮೂಲಕ ಅವರನ್ನು ಕ್ರಿಯಾಶೀಲವಾದ ಚಟುವಟಿಕೆಗಳಲ್ಲಿ ತೊಡಗಿಸುತ್ತಾರೆ. ಈ ಚಟುವಟಿಕೆಗಳು ಮಕ್ಕಳ ಬೆಳವಣಿಗೆಗೆ ಅನುಕೂಲಕರವಾದಂತಹ ಹತ್ತು ಹಲವು ಕಲಿಕೆಗಳನ್ನು ಹೊಂದಿದ್ದು ಮಕ್ಕಳ ಆಸಕ್ತಿಯನ್ನು ಗುರುತಿಸಲು ಮತ್ತು ಅವುಗಳನ್ನು ನಿರಂತರವಾಗಿ ಮಾಡಲು ಪ್ರೇರೇಪಣೆ ನೀಡುತ್ತವೆ. ಇಲ್ಲಿ ನೀಡುವ ನಿರಂತರ ಕಲಿಕಾ ಚಟುವಟಿಕೆಗಳು ಮಕ್ಕಳ ಮನೋದೈಹಿಕ ಬೆಳವಣಿಗೆಗೆ ಕಾರಣವಾಗಿದ್ದು ಇಲ್ಲಿ ಕಲಿಯುತ್ತಿರುವ ಮಕ್ಕಳು ಈ ಹಿಂದೆ ಶಾಲೆಯಲ್ಲಿ ಕಲಿಯುವಾಗ ಮಾಡುತ್ತಿದ್ದ ಬಹುತೇಕ ತಪ್ಪುಗಳನ್ನು ಇದೀಗ ಪುನರಾವರ್ತಿಸುತ್ತಿಲ್ಲ ಎಂಬುದು ಸಂತಸದ ವಿಷಯ.. ಇದೀಗ ಸುಬೋಧ ಕಲಿಕಾ ಕೇಂದ್ರದಲ್ಲಿ ಅವರು ತಮ್ಮೆಲ್ಲ ತಪ್ಪುಗಳನ್ನು ಸುಧಾರಿಸಿಕೊಂಡಿದ್ದು ವೈವಿಧ್ಯಮಯ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ.

ಕ್ರಿಯಾಶೀಲ ಚಟುವಟಿಕೆಗಳು ಕಲಿಕೆಗೆ ದಾರಿ ಮತ್ತು ಕಲಿಕೆಗೆ ದಾರಿಯಾಗುವ ಮೂಲಕ ಉತ್ತಮ ಅಂಕಗಳನ್ನು ಗಳಿಸುವುದು ಸಾಧ್ಯ ಮತ್ತು ಚಟುವಟಿಕೆಗಳು ಮನಸ್ಸಿನ ಭಯ, ಆತಂಕಗಳನ್ನು ಹೋಗಲಾಡಿಸಿ ಮಕ್ಕಳ ಕ್ರಿಯಾಶೀಲತೆಯನ್ನು ಹೆಚ್ಚಿಸಿ ಅವರಲ್ಲಿ ಉತ್ಸಾಹ ಸ್ಫೂರ್ತಿಯನ್ನು ತುಂಬುತ್ತವೆ.

ಕ್ರಿಯಾಶೀಲ ಚಟುವಟಿಕೆಗಳ ಮೂಲಕ ಅನುಭವವನ್ನು ಗಳಿಸುವ ಮಕ್ಕಳು ಶೈಕ್ಷಣಿಕವಾಗಿ ಜಾಣರಾಗುತ್ತಾರೆ. ಪಚ್ಚ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಸದಾ ಮಂಚೂಣಿಯಲ್ಲಿ ಇರುತ್ತಾರೆ. ನಾಯಕತ್ವ ಗುಣಗಳನ್ನು ಬೆಳೆಸಿಕೊಳ್ಳುತ್ತಾರೆ. ತಮ್ಮ ಕ್ರಿಯಾಶೀಲತೆಯ ಲಾಭವನ್ನು ಪಡೆಯುವ ಅವರು ಉತ್ತಮವಾದ ನಿರ್ಣಯಗಳನ್ನು ಕೈಗೊಳ್ಳಲು ಸಾಧ್ಯ ಮಕ್ಕಳು ಮಾಡುವ ಚಟುವಟಿಕೆಗಳು ಅವರ ಉತ್ತಮ



ಭವಿಷ್ಯಕ್ಕೆ ಪೂರಕವಾಗಿ ಕಾರ್ಯನಿರ್ವಹಿಸುತ್ತವೆ.

ಸಾಮಾನ್ಯ ಮಕ್ಕಳು ಮಾತ್ರವಲ್ಲದೆ ಮಂದಮತಿಯನ್ನು ಹೊಂದಿರುವ ಮಕ್ಕಳನ್ನು ಕೂಡ ಸೃಜನಶೀಲ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತೆ ಮಾಡುವ ಮೂಲಕ ಅವರನ್ನು ಬದುಕಿನ ಎಲ್ಲ ಮಗ್ಗುಲುಗಳಿಗೆ ಪರಿಚಯಿಸಬಹುದು. ಕ್ರಿಯಾತ್ಮಕ ಚಟುವಟಿಕೆಗಳು ಮಕ್ಕಳನ್ನು ಸತ್ವ ಭರಿತರನ್ನಾಗಿಸುತ್ತವೆ.

ಸೃಜನಶೀಲ ಚಟುವಟಿಕೆಗಳು ಮಕ್ಕಳನ್ನು ಒತ್ತಡ ಮತ್ತು ಆತಂಕದಿಂದ ಮುಕ್ತರನ್ನಾಗಿಸಿ ಕ್ರಿಯಾಶೀಲರನ್ನಾಗಿಸುತ್ತದೆ ಮಕ್ಕಳು ಉತ್ತಮ ನಿರ್ಣಯಗಳನ್ನು ತೆಗೆದುಕೊಳ್ಳುವ ಶಕ್ತಿಯನ್ನು ಹೊಂದುತ್ತಾರೆ ಜೊತೆಗೆ ಮಕ್ಕಳು ಹೊಂದಾಣಿಕೆಯ ಮನೋಭಾವವನ್ನು,ಸಮಯ ಪ್ರಜ್ಞೆಯನ್ನು ಮತ್ತು ನಿರ್ವಹಣಾ ಸಾಮರ್ಥ್ಯವನ್ನು ತೋರುತ್ತಾರೆ.

ಮಕ್ಕಳು ಕ್ರಿಯಾತ್ಮಕ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುವಂತಹ ವಾತಾವರಣವನ್ನು ಪಾಲಕರು ಸೃಷ್ಟಿಸಬೇಕು. ಮಕ್ಕಳ ಪಾಲಿಗೆ ಪಾಲಕರು, ಅಜ್ಜ ಅಜ್ಜಿಯರು ಆಯಸ್ಕಾಂತವಾಗಬೇಕು, ಮಕ್ಕಳ ಮಾನಸಿಕ ಬೆಳವಣಿಗೆಗೆ ಮತ್ತು ಮೌಲ್ಯಯುತ ಜೀವನಕ್ಕೆ ಅತ್ಯವಶ್ಯಕವಾದ ಕಥೆ,ಕವನಗಳನ್ನು ಹೇಳುವ, ಮಹಾಪುರುಷರ ಚರಿತ್ರೆಗಳನ್ನು ರಾಮಾಯಣ ಮಹಾಭಾರತ ದಂತಹ ಮಹಾಕಾವ್ಯಗಳ ಕಥೆಗಳನ್ನು ಹೇಳುವ ಮೂಲಕ, ಹಾಡುಗಳನ್ನು ಕಲಿಸುವ ನಿಟ್ಟಿನಲ್ಲಿ ಪಾಲಕರು ಕಾರ್ಯನಿರ್ವಹಿಸಬೇಕು. ಪಾಲಕರೇ ಮೊಬೈಲ್ ಹಿಡಿದು ಕುಳಿತರೆ ಮಕ್ಕಳು ಮೊಬೈಲ್ ಹಿಡಿಯದೆ ಮತ್ತಿನ್ನೇನು ಮಾಡಿಯಾರು? ಮಕ್ಕಳಲ್ಲಿ ಕೌಶಲ್ಯ ಅಭಿವೃದ್ಧಿಯನ್ನು ಪಾಲಕರು ಮಾಡಲೇಬೇಕು.

ಇನ್ನು ಶಾಲೆಗಳಲ್ಲಿ ದೈಹಿಕ ಶಿಕ್ಷಕರು ತಮ್ಮ ತರಗತಿಯನ್ನು ಉಳಿದ ಭಾಷಾ ವಿಷಯಗಳ ಶಿಕ್ಷಕರಿಗೆ ಬಿಟ್ಟುಕೊಡದೆ ತಾವೇ ತೆಗೆದುಕೊಂಡು ಮಕ್ಕಳಿಗೆ ವಿವಿಧ ರೀತಿಯ ಆಟೋಟಗಳಲ್ಲಿ ತೊಡಗಿಸಿಕೊಳ್ಳುವಂತೆ ತರಬೇತಿ ನೀಡಬೇಕು. ಆಟೋಟಗಳ ಮೂಲಕ ಮಕ್ಕಳ ಪಂಚೇಂದ್ರಿಯಗಳು ಮತ್ತು ಕೈಕಾಲುಗಳು ಸರಳವಾಗಿ ಕಾರ್ಯನಿರ್ವಹಿಸುತ್ತವೆ. ಮಕ್ಕಳ ಮೆದುಳಿನ ಶಕ್ತಿ ಮತ್ತು ದೈಹಿಕ ಚಾಲನಾ ಶಕ್ತಿ ಜಾಗೃತಗೊಳ್ಳುತ್ತದೆ. ಮಕ್ಕಳ ಕಲಿಕೆಗೆ ಪೂರಕವಾಗಿ ಕಾರ್ಯನಿರ್ವಹಿಸಲು ಈ ಎಲ್ಲ ವಿಷಯಗಳು ಸಹಕಾರಿ ಆಗುತ್ತವೆ.. ಮೊಬೈಲ್ ನ ಚಟ ತಂತಾನೇ ಹಿಂದೆ ಬೀಳುತ್ತದೆ..





ಲೇಖಿನ
■ ವೀಣಾ ಹೇಮಂತ್ ಗೌಡ ಪಾಟೀಲ್
ಮುಂಡರಗಿ
ಗದಗ ಜಿಲ್ಲೆ

# ಸಾರಿಗೆ ನೌಕರರ 38 ತಿಂಗಳ ಹಿಂಬಾಕಿ ಪಾವತಿಗೆ ಒತ್ತಾಯ

ಕಲಬುರ್ಗಿ: ಸಾರಿಗೆ ನೌಕರರ 38 ತಿಂಗಳು ಹಿಂಬಾಕಿಯನ್ನು ರಾಜ್ಯ ಸರ್ಕಾರವು ಕೂಡಲೇ ಪಾವತಿಸಬೇಕು ಎಂದು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಮಜದೂರ್ ಸಂಘದ ಈಶಾನ್ಯ ವಲಯದ ಅಧ್ಯಕ್ಷ ಶಿವಪುತ್ರಪ್ಪ ಬೆಳಮಗಿ ಅವರು ಒತ್ತಾಯಿಸಿದರು.

ನಗರದ ಪತ್ರಿಕಾ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾರಿಗೆ ನಿಗಮದ ನೌಕರರ ಕಳೆದ 2024ರ ಜನವರಿ 1ರ ವೇತನ ಪರಿಷ್ಕರಣೆ ಹಾಗೂ 2020 ಜನವರಿ 1ರ ವೇತನ ಪರೀಷ್ಕರಣೆಯ 38 ತಿಂಗಳ ಹಿಂಬಾಕಿ ವೇತನ ಪಾವತಿಯಲ್ಲಿ ಸರ್ಕಾರ ತೋರುತ್ತಿರುವ ಅತಿಯಾದ ವಿಳಂಬ ಮಾಡುತ್ತಿದೆ ಹಾಗೂ ಸಾರಿಗೆ ನೌಕರರನ್ನು ಅವರ ಬೇಡಿಕೆಗಳನ್ನು ಕಡೆಗಣಿ ಸುತ್ತಿರುವದಲ್ಲದೇ ಕಾರ್ಮಿಕರ ಹೋರಾಟದ ಹಕ್ಕನ್ನು ಸಹ ಕಸಿದುಕೊಂಡು ಕಾರ್ಮಿಕರ ಮೇಲೆ ದಬ್ಬಾಳಿಕೆ ಮಾಡುತ್ತಿದೆ ಎಂದು ದೂರಿದರು.

ಕೂಡಲೇ 2024ರ ಜನವರಿ 31ರ ವೇತನ ಪರಿಷ್ಕರಣೆ ಮಾಡುವಂತೆ, 2020ರ ಜನವರಿ 1ರ ಪರಿಷ್ಕರಣೆಯ 38 ತಿಂಗಳು ಹಿಂಬಾಕಿ ಪಾವತಿಸುವಂತೆ, ಕಾರ್ಮಿಕರ ಮೇಲಿನ ಕಿರುಕುಳ ಹಾಗೂ ದೌರ್ಜನ್ಯ ನಿಲ್ಲಿಸುವಂತೆ ಅವರು ಒತ್ತಾಯಿಸಿದರು.

ಬೇಡಿಕೆಗಳಿಗೆ ಸ್ಪಂದಿಸದೇ ಹೋದಲ್ಲಿ ಮುಂದಿನ ದಿನಗಳಲ್ಲಿ ಕಾನೂನು ಮೂಲಕ ಹೋರಾಟ ಮಾಡಬೇಕಾಗುತ್ತದೆ ಎಂದು ಅವರು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ದೇವರಾಜ್ ಎಸ್. ಚೌರ್, ಆರ್. ದೇವದಾನ್, ಜೆಟ್ಟೆಪ್ಪ ಠಾಣಗುಂದಿ, ಬಸವರಾಜ್ ಮಿತ್ರ, ರಮೇಶ್ ಕಾಂದೆ, ಅಜಯ್ ತಳವಾರ್, ವೈಜನಾಥ ಪಾಟೀಲ್ ಮುಂತಾದವರು ಉಪಸ್ಥಿತರಿದ್ದರು.

# ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಕಳಪೆ ಸ್ಥಾನ: ಕಲಬುರ್ಗಿ ಜಿಲ್ಲೆಗೆ ಹ್ಯಾಟ್ರಿಕ್ ಕುಖ್ಯಾತಿ..!

ಕಲಬುರ್ಗಿ: ಇಡೀ ಕರ್ನಾಟಕದಲ್ಲಿಯೇ ಜಿಲ್ಲೆಯ ಎಸ್‌ಎಸ್‌ಎಲ್‌ಸಿ ಫಲಿತಾಂಶವು ಅತ್ಯಂತ ಕಳಪೆಯಾಗಿದೆ. ಕಳೆದ ಮೂರು ವರ್ಷಗಳ ಅವಧಿಯಲ್ಲಿ ಜಿಲ್ಲೆಯ ಎಸ್‌ಎಸ್‌ಎಲ್‌ಸಿ ಕಳಪೆ ಫಲಿತಾಂಶವನ್ನು ಹೊಂದಿದೆ. ಹೀಗಾಗಿ ಜಿಲ್ಲೆಯು ಎಸ್‌ಎಸ್‌ಎಲ್‌ಸಿಯಲ್ಲಿ ಕೊನೆಯ ಸ್ಥಾನ ಎಂಬ ಕುಖ್ಯಾತಿಯನ್ನು ಹೊಂದಿದೆ.

ಕಳೆದೆರಡು ವರ್ಷಗಳಂತೆಯೇ ಈ ಬಾರಿಯೂ ಸಹ ಜಿಲ್ಲೆಯು ಕೊನೆಯ ಸ್ಥಾನದಲ್ಲಿದೆ. ಈ ಬಾರಿ ಶೇಕಡಾ 98.40 ಫಲಿತಾಂಶದೊಂದಿಗೆ ದಕ್ಷಿಣ ಕನ್ನಡ ಜಿಲ್ಲೆ ಪ್ರಥಮ ಸ್ಥಾನ ಪಡೆದುಕೊಂಡಿದ್ದರೆ, ಶೇಕಡಾ 98.18 ಫಲಿತಾಂಶ ಪಡೆದ ಉಡುಪಿ ದ್ವಿತೀಯ ಸ್ಥಾನ ಪಡೆದುಕೊಂಡಿದೆ. 85.06 ಫಲಿತಾಂಶದೊಂದಿಗೆ ಕಲಬುರ್ಗಿ ಜಿಲ್ಲೆ ಕೊನೆಯ ಸ್ಥಾನದಲ್ಲಿದೆ.

ಜಿಲ್ಲಾವಾರು ಫಲಿತಾಂಶದ ಪಟ್ಟಿಯಲ್ಲಿ ಕರಾವಳಿ ಜಿಲ್ಲೆಗಳು ಅದ್ಭುತ ಸಾಧನೆ ಮಾಡಿವೆ. ಶೇಕಡಾ 91.12ರಷ್ಟು ವಿದ್ಯಾರ್ಥಿಗಳು ಪಾಸ್ ಆಗುವ ಮೂಲಕ ದಕ್ಷಿಣ ಕನ್ನಡ ಜಿಲ್ಲೆ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದರೆ, ಶೇಕಡಾ 89.96ರೊಂದಿಗೆ ಉಡುಪಿ ದ್ವಿತೀಯ ಹಾಗೂ ಶೇಕಡಾ 83.19ರೊಂದಿಗೆ ಉತ್ತರ ಕನ್ನಡ ಜಿಲ್ಲೆ ತೃತೀಯ ಸ್ಥಾನ ಗಳಿಸಿವೆ. ಶಿವಮೊಗ್ಗ (ಶೇಕಡಾ 82.29) ಮತ್ತು ಕೊಡಗು (ಶೇಕಡಾ 82.21) ನಂತರದ ಸ್ಥಾನಗಳಲ್ಲಿವೆ. ಆದರೆ, ಕಲ್ಯಾಣ ಕರ್ನಾಟಕ ಭಾಗದ ಕಲಬುರ್ಗಿ ಜಿಲ್ಲೆ ಕೇವಲ ಶೇ. 42.43ರಷ್ಟು ಫಲಿತಾಂಶದೊಂದಿಗೆ ಕೊನೆಯ ಸ್ಥಾನಕ್ಕೆ




ತಳ್ಳಲ್ಪಟ್ಟಿದೆ.

ಕಳೆದ ಬಾರಿಯ ಕಳಪೆ ಫಲಿತಾಂಶಕ್ಕೆ ಸಂಬಂಧಿಸಿದಂತೆ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆಯವರು ಕಳಪೆ ಫಲಿತಾಂಶದ ಹೊಣೆಯನ್ನು ಹೊರುವುದಾಗಿ ಹೇಳಿದ್ದರು. ಯಾವ ರೀತಿ ಹೊಣೆ ಎಂಬುದನ್ನು ಮಾತ್ರ ಹೇಳಿರಲಿಲ್ಲ. ಈಗ ಮತ್ತೆ ಕಳಪೆ ಫಲಿತಾಂಶ ಬಂದಿದೆ. ಕಳಪೆ ಫಲಿತಾಂಶಕ್ಕೆ ಕೇವಲ ಜಿಲ್ಲಾ ಉಸ್ತುವಾರಿ ಸಚಿವರೊಬ್ಬರೇ ಹೊಣೆಯಲ್ಲ, ಎಲ್ಲಿ ಲೋಪದೋಷಗಳಿವೆ, ವೈಫಲ್ಯವಿದೆ ಎಂಬುದರ ಕುರಿತು ಪರಾಮರ್ಶೆ ಮಾಡಬೇಕಾಗಿದೆ. ಕಳಪೆ ಫಲಿತಾಶಂಕ್ಕೆ ಶಿಕ್ಷಣ ಇಲಾಖೆಯ ಅಧಿಕಾರಿಗಳ ವೈಫಲ್ಯವೇ ಇಲ್ಲವೇ ಶಿಕ್ಷಕರು ಸರಿಯಾಗಿ ಬೋಧನೆ ಮಾಡಲಿಲ್ಲವೇ, ಮೂಲಭೂತ ಸೌಲಭ್ಯಗಳ ಕೊರತೆಯೇ?, ಮುಂತಾದ ವಿಷಯಗಳ ಕುರಿತು ಚರ್ಚಿಸಬೇಕಾಗಿದೆ.

ಏನೇ ಆದರೂ ಮೇಲ್ನೋಟಕ್ಕೆ ಶಿಕ್ಷಕರ ಕೊರತೆಯೂ ಜಿಲ್ಲೆಯ ವಿದ್ಯಾರ್ಥಿಗಳ ಕಳಪೆ ಫಲಿತಾಂಶಕ್ಕೆ ಪ್ರಮುಖ ಕಾರಣ ಎಂಬುದು ಬಹಿರಂಗಗೊಂಡಿದೆ. ಅದರಲ್ಲೂ ಇಂಗ್ಲೀಷ್, ವಿಜ್ಞಾನ ಮತ್ತು ಗಣಿತ ವಿಷಯಗಳ ಶಿಕ್ಷಕರ ಕೊರತೆಯಿಂದ ಹೆಚ್ಚಿನ ವಿದ್ಯಾರ್ಥಿಗಳು ಕಳಪೆ ಫಲಿತಾಂಶ ಹೊಂದಲು ಕಾರಣವಾಗಿವೆ. ಈ ಕುರಿತು ಶಿಕ್ಷಣ ತಜ್ಞೆ ಡಾ. ಛಾಯಾ ದೇಗಾಂವಕರ್ ಅವರು ವರದಿಯನ್ನು ಕೊಟ್ಟಿದ್ದು, ಮೈಸೂರು ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ರೀತಿಯಲ್ಲಿಯೇ ವಿದ್ಯಾರ್ಥಿಗಳ ಮತ್ತು ಶಿಕ್ಷಕರ ಅನುಪಾತ ಆಗಬೇಕು ಎಂದು ಉಲ್ಲೇಖಿಸಿದ್ದಾರೆ. ಆ ವರದಿಯನ್ನು ಬಿ.ಎಸ್. ಯಡಿಯೂರಪ್ಪ ಅವರ ಸರ್ಕಾರದಲ್ಲಿದ್ದಾಗಲೇ ಮಂಡಿಸಲಾಗಿತ್ತು. ಆ ವರದಿಯನ್ನು ಈವರೆಗೂ ಜಾರಿ ಮಾಡದೇ ಈಗ ಅವರ ನೇತೃತ್ವದಲ್ಲಿಯೇ ರಾಜ್ಯ ಕಾಂಗ್ರೆಸ್ ಸರ್ಕಾರವು ಶಿಕ್ಷಣ ತಜ್ಞರ ಸಮಿತಿಯನ್ನು ರಚಿಸಿದೆ. ಸಮಿತಿಯ ವರದಿಯನ್ನು ಆಧರಿಸಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯು ಅಕ್ಷರ ಆವಿಷ್ಕಾರ ಎಂಬ ಯೋಜನೆ ಜಾರಿಗೆ ತಂದಿದೆ. ಆ ಯೋಜನೆ ಜಾರಿಗೆ ಬಂದೂ ಮೂರು ವರ್ಷಗಳು ಕಳೆದಿವೆ. ಯಾವುದೇ ರೀತಿಯಲ್ಲಿ ಶೈಕ್ಷಣಿಕ ಸುಧಾರಣೆ ಕಂಡಿಲ್ಲ ಎನ್ನುವುದಕ್ಕೆ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿನ ಕಳಪೆ ಫಲಿತಾಂಶವೇ ಸಾಕ್ಷಿಯಾಗಿದೆ. ರಾಜ್ಯ ಮಟ್ಟದೊಂದಿಗೆ ಪೈಪೋಟಿ ಒಡ್ಡಲೂ ಸಹ ಜಿಲ್ಲೆಯ ವಿದ್ಯಾರ್ಥಿಗಳು ವಿಫಲವಾಗುತ್ತಿದ್ದಾರೆ.



# ಹರವಾಳದಲ್ಲಿ ನೀರಿಗಾಗಿ ಹಾಹಾಕಾರ: ಖಾಲಿ ಕೊಡಗಳೊಂದಿಗೆ ಪ್ರತಿಭಟನೆ

ಜೇವರ್ಗಿ: ಕುಡಿಯುವ ನೀರಿಗಾಗಿ ಆಗ್ರಹಿಸಿ ಬುಧವಾರ ತಾಲ್ಲೂಕಿನ ಹರವಾಳ ಗ್ರಾಮ ಪಂಚಾಯಿತಿ ಕಚೇರಿಯ ಎದುರು ಕರ್ನಾಟಕ ಪ್ರಾಂತ ರೈತ ಸಂಘದ ಗ್ರಾಮ ಘಟಕದ ವತಿಯಿಂದ ಪ್ರತಿಭಟನೆ ನಡೆಸಲಾಯಿತು. ರೈತ ಸಂಘದ ಮುಖಂಡರು, ಮಹಿಳೆಯರು ಖಾಲಿ ಕೊಡಗಳೊಂದಿಗೆ ಗ್ರಾಮ ಪಂಚಾಯಿತಿ ಕಚೇರಿಯವರೆಗೆ ಪ್ರತಿಭಟನಾ ಮೆರವಣಿಗೆ ಮಾಡಿದರು.

ಈ ಸಂದರ್ಭದಲ್ಲಿ ಪ್ರಾಂತ ರೈತ ಸಂಘದ ತಾಲ್ಲೂಕು ಅಧ್ಯಕ್ಷ ಸುಭಾಷ ಹೊಸಮನಿ ಅವರು ಮಾತನಾಡಿ, ಕಳೆದ ಎರಡು ತಿಂಗಳುಗಳಿಂದ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಿದ್ದು, ಇದರಿಂದ ಗ್ರಾಮಸ್ಥರು ಸಾಕಷ್ಟು ಪರದಾಡುವಂತಾಗಿದೆ. ಈ ಬಗ್ಗೆ ಹಲವಾರು ಬಾರಿ ಸಂಬಂಧಪಟ್ಟ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯತಿ ಅಧಿಕಾರಿಗಳ ಗಮನಕ್ಕೆ ತಂದರೂ ಸಹ ಯಾಔಉದೇ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿದರು.

ಹೋರಾಟದ ಸ್ಥಳಕ್ಕೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಗುರುಶಾಂತಯ್ಯ ಗದ್ದಿಗಿಮಠ ಅವರು ಭೇಟಿ ನೀಡಿ ಸಮಸ್ಯೆ ಆಲಿಸಿದರು. ಆಗ ಪ್ರತಿಭಟನೆಕಾರರು ಮನವಿ ಪತ್ರ ಸಲ್ಲಿಸಿ, ಕೂಡಲೇ ನೀರಿನ ಸಮಸ್ಯೆ ಪರಿಹರಿಸುವಂತೆ, ನರೇಗಾದಲ್ಲಿ ಕೆಲಸ ಮಾಡಿರುವ ಕೂಲಿ ಕಾರ್ಮಿಕರಿಗೆ ಬಾಕಿ ಇರುವ ಕೂಲಿ ಹಣ ಹಾಗೂ ಕೆಲಸ ನೀಡುವಂತೆ, ಹರವಾಳ ಗ್ರಾಮದ ಪ್ರತಿ ಬಡಾವಣೆಯಲ್ಲಿ ಚರಂಡಿಗಳ ಸ್ವಚ್ಛತೆ ಹಾಗೂ ಸಿಸಿ ರಸ್ತೆ ನಿರ್ಮಿಸುವಂತೆ, ಮಹಿಳೆಯರಿಗೆ ಶೌಚಾಲಯದ ವ್ಯವಸ್ಥೆ ಕಲ್ಪಿಸುವಂತೆ ಒತ್ತಾಯಿಸಿದರು.

# ಶಿಕ್ಷಣ ಎಲ್ಲರ ಹಕ್ಕು: ಡಾ. ಸಯ್ಯದ್ ಮುಸ್ತಫಾ ಹುಸ್ಸೇನಿ

ಕಲಬುರ್ಗಿ: ಎಲ್ಲ ಸಮಸ್ಯೆಗಳಿಗೆ ಸಮಾಧಾನ ಶಿಕ್ಷಣ. ಅದನ್ನು ಪಡೆಯುವ ಹಕ್ಕು ಎಲ್ಲರಿಗೂ ಇದೆ ಎಂದು ಕೆಬಿಎನ್ ವಿಶ್ವವಿದ್ಯಾಲಯದ ಕ್ಯಾಂಪಸ್ ನಿರ್ದೇಶಕ ಡಾ ಸಯ್ಯದ್ ಮುಸ್ತಫಾ ಅಲ್ ಹುಸ್ಸೇನಿ ಅವರು ಹೇಳಿದರು.

ಬುಧವಾರ ಸಯ್ಯದ ಅಕ್ಬರ ಹುಸ್ಸೇನಿ ಅಕ್ಯಾಡೆಮಿ ಲೋಕಾರ್ಪಣೆ ಸಮಾರಂಭದಲ್ಲಿ ಮಾತನಾಡಿದ ಅವರು, ಪಿಯುಸಿ ನಂತರ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಸಲವಾಗಿ ಗುಲ್ಬರ್ಗಾ ವಿದ್ಯಾರ್ಥಿಗಳು ಬೇರೆ ಊರಿಗೆ ಹಣ ಖರ್ಚು ಮಾಡಿ ಹೋಗುವ ಅವಶ್ಯಕತೆ ಇಲ್ಲ. ಗುಲ್ಬರ್ಗಾದಲ್ಲಿಯೇ ಅಕ್ಯಾಡೆಮಿ ಪಿಯುಸಿಯಿಂದಲೇ ಸಿಇಟಿ, ಜೆಇಇ, ನೀಟ್ ಪರೀಕ್ಷೆ ತರಬೇತಿ ಅತ್ಯಂತ ಕಡಿಮೆ ದರದಲ್ಲಿ ನೀಡುತ್ತೇವೆ. 10ನೆಯ ತರಗತಿಯಲ್ಲಿ 95ಕ್ಕೂ ಹೆಚ್ಚಿನ ಅಂಕ ಬಂದಲ್ಲಿ ಅವರಿಗೆ 100ರಷ್ಟು ವಿದ್ಯಾರ್ಥಿ ವೇತನ ನೀಡಲಾಗುವುದು.




90ರಿಂದ 94% ಮಾಡಿದಲ್ಲಿ ಶೇಕಡಾ 50ರಷ್ಟು ರಿಯಾಯತಿ ಇದೆ ಎಂದರು. ಉಪ ಕುಲಪತಿ ಪ್ರೊ. ಅಲಿ ರಜಾ ಮೂಸ್ವಿ ಅವರು ಮಾತನಾಡಿ, ಕಠಿಣ ಪರಿಶ್ರಮ, ಸಮಯ ಪಾಲನೆ ಮತ್ತು ಸರಿಯಾದ ಕೇಂದ್ರೀಕರಣವಿದ್ದರೆ ಏನನ್ನಾದರೂ ಸಾಧಿಸಬಹುದು. ಖಾಜಾ ಎಡುಕೇಶನ್ ಸಂಸ್ಥೆ ಜ್ಞಾನಾರ್ಜನೆಯಲ್ಲಿ ನಿರತವಾಗಿದ್ದು ವಿದ್ಯಾರ್ಥಿಗಳ ಉತ್ತಮ ಭವಿಷ್ಯಕ್ಕಾಗಿ ನಿರಂತರ ಶ್ರಮಿಸುತ್ತಿದೆ ಎಂದರು.

ಸಮ ಉಪಕುಲಪತಿ ಪ್ರೊ ಅಶಫಾಕ್ ಅಹ್ಮದ್ ಅವರು ಮಾತನಾಡಿ, ಕಡಿಮೆ ಖರ್ಚಿನಲ್ಲಿ ಒಳ್ಳೆಯ ಕೋರ್ಸಗಳು ಲಭ್ಯಇವೆ. ಅಲ್ಲದೇ ನುರಿತ ಅಧ್ಯಪಕರನ್ನು ನೇಮಕ ಮಾಡಲಾಗಿದೆ. ಈ ಅವಕಾಶದ ಸದುಪಯೋಗ ಪಡೆದುಕೊಳ್ಳುವತೆ ಹೇಳಿದರು.

ಪ್ರೊ ಪಠಾಣ ಅವರು ಮಾತನಾಡಿ, ಖಾಜಾ ಸಂಸ್ಥೆ ಬೆಳೆದು ಬಂದ ದಾರಿ ಹಾಗೂ ಸಮಾಜದಲ್ಲಿ ಶಿಕ್ಷಣ ಪ ಸರಿಸುವ ಕಾರ್ಯ ಕುರಿತು ಮಾತನಾಡಿ ದಿವಂಗತ ಡಾ ಸಯ್ಯದ ಶಹಾ ಖುಸ್ರೋ ಹುಸ್ಸೇನಿ ಸಾಹೇಬರ ಕನಸು ನನಸಾಗಲಿದೆ ಎಂದರು. ಪ್ರಾಚಾರ್ಯ ಡಾ. ಫಿರೋಜ್ ಅವರು ಮಾತನಾಡಿ, ಪ್ರಥಮ ಪಿಯುಸಿಗೆ ಕೇವಲ 18000 ರೂ.ಗಳ ಶುಲ್ಕ, ತರಬೇತಿಗೆ 22000ರೂ.ಗಳು ಇರುತ್ತದೆ. ಕೂಡಲೇ ನೋಂದಣಿ ಮಾಡಿದರೆ 2000 ರೂ.ಗಳು ಕಡಿಮೆ ಮಾಡುವ ಅವಕಾಶವಿದೆ. ಕಲಾ ವಿಭಾಗದಲ್ಲಿ ಕೇವಲ 8000 ವರ್ಷಕ್ಕೆ ಹಾಗೂ ವಾಣಿಜ್ಯದಲ್ಲಿ ಕೇವಲ 10000 ವರ್ಷಕ್ಕೆ ಎಂದರು.

# ಎಸ್‌ಎಸ್‌ಎಲ್‌ಸಿ ಫಲಿತಾಂಶ: ಬಿಜೆಪಿಯ ಟೀಕೆಗೆ ಸಚಿವ ಪ್ರಿಯಾಂಕ್ ಖರ್ಗೆ ಮಾರುತ್ತರ



ಕಲಬುರ್ಗಿ: ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಕಲಬುರ್ಗಿ ಜಿಲ್ಲೆ ಕೊನೆಯ ಸ್ಥಾನದಲ್ಲಿದೆ ಎನ್ನುವ ಹಿನ್ನೆಲೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಜೊತೆಗೆ ಜಿಲ್ಲೆಯ ಮಕ್ಕಳಿಗೆ ಅವಮಾನವಾಗುವ ರೀತಿಯಲ್ಲಿ ಟ್ವಿಟ್ ಮಾಡಿ ಟೀಕಿಸಿದ್ದ ಬಿಜೆಪಿಗೆ ಖರ್ಗೆ ಟ್ವಿಟ್ ಮೂಲಕ ಮಾರುತ್ತರ ನೀಡಿದ್ದು ವಿದ್ಯಾರ್ಥಿಗಳ ಆತ್ಮವಿಶ್ವಾಸ ಕುಗ್ಗಿಸುವ ಕೆಲಸ ಬಿಜೆಪಿ ಮಾಡುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕಲಬುರ್ಗಿಯ ವಿದ್ಯಾರ್ಥಿಗಳನ್ನು ಅವಮಾನಿಸುತ್ತಿರುವಬಿಜೆಪಿ,ಅವರಆತ್ಮಸ್ಥೈರ್ಯವನ್ನು, ಆತ್ಮವಿಶ್ವಾಸವನ್ನು ಅಡಗಿಸುವ ಪ್ರಯತ್ನ ಮಾಡುತ್ತಿದೆ. ನಿಮಗೆಸಮಸ್ಯೆಇದ್ದರೆನನ್ನನ್ನುನಿಂದಿಸಿ,ಕಲಬುರ್ಗಿಯ ಮಕ್ಕಳನ್ನು ಅಪಹಾಸ್ಯ ಮಾಡುತ್ತಿರುವುದೇಕೆ? ಜಿಲ್ಲೆಯ ಶೇಕಡಾವಾರು ಫಲಿತಾಂಶ 85ರಷ್ಟು ಇರಬಹುದು, ಕಳೆದ ಶೈಕ್ಷಣಿಕ ವರ್ಷಕ್ಕಿಂತ ಈ ಬಾರಿ ಉತ್ತಮ ಫಲಿತಾಂಶ ಬಂದಿದೆ, ರಾಜ್ಯದಲ್ಲೂ ಮತ್ತು ಕಲಬುರ್ಗಿ ಜಿಲ್ಲೆಯಲ್ಲೂ, ಶೈಕ್ಷಣಿಕ ಗುಣಮಟ್ಟದ ಸುಧಾರಣೆ ಮಾಡಿಕೊಳ್ಳುವ ಶಕ್ತಿ ನಮ್ಮ ಜಿಲ್ಲೆಯ ಮಕ್ಕಳಲ್ಲಿದೆ, ಮತ್ತು ಅದು ಸಾಧ್ಯವಾಗುತ್ತದೆ ಕೂಡ ಎಂದು ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಆದರೆ ಪ್ರತಿ ಬಾರಿಯೂ ಕಲಬುರ್ಗಿ ಜಿಲ್ಲೆಯ ಮಕ್ಕಳನ್ನು ಅವಮಾನಿಸುತ್ತಿರುವ ಬಿಜೆಪಿ ರಾಜಕೀಯ ದಿವಾಳಿತನದೊಂದಿಗೆ ನೈತಿಕ ಪ್ರಜ್ಞೆಯೂ ದಿವಾಳಿಯಾಗಿರುವುದನ್ನು ನಿರೂಪಿಸುತ್ತಿದೆ. ಜಿಲ್ಲೆಯಲ್ಲಿನ ಬಿಜೆಪಿ ನಾಯಕರ ಮತ್ತು ಕಾರ್ಯಕರ್ತರ ಮಕ್ಕಳಿಗೂ ದಡ್ಡರು ಎಂಬ ಹಣೆಪಟ್ಟಿಯನ್ನು ಬಿಜೆಪಿ ಕಟ್ಟುತ್ತಿದೆಯೇ? ಜಿಲ್ಲೆಯ ಮಕ್ಕಳ ಮನಸಿನ ಮೇಲೆ ದುಷ್ಪರಿಣಾಮ ಬೀರುವಂತಹ ಮಾತುಗಳನ್ನಾಡುತ್ತಿರುವ ಬಿಜೆಪಿಗೆ ಕನಿಷ್ಠ ಸಾಮಾನ್ಯ ಪ್ರಜ್ಞೆ ಇಲ್ಲದಿರುವುದು ನಾಡಿನ ದುರಂತ ಎಂದು ಅವರು ಕಿಡಿಕಾರಿದ್ದಾರೆ.

ಜಿಲ್ಲೆಯ ಮಕ್ಕಳ ಶ್ರಮವನ್ನು, ಅವರ ಬೌದ್ಧಿಕ ಸಾಮರ್ಥ್ಯವನ್ನು ಅವಮಾನಿಸುವ, ಅವರ ಆತ್ಮವಿಶ್ವಾಸವನ್ನು ಕುಗ್ಗಿಸುವ ಕೆಲಸವನ್ನು ಬಿಜೆಪಿ ನಿಲ್ಲಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ.

# ಪರಿಶಿಷ್ಟ ಸಮುದಾಯದ ಪೀಠಾಧಿಪತಿಗಳಿಗೆ ಪೋಲಿಸರಿಂದ ಅವಮಾನ: ಕ್ರಮಕ್ಕೆ ಬಿಜೆಪಿ ಗಡುವು



ಕಲಬುರ್ಗಿ: ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರನ್ನು ಭೇಟಿ ಮಾಡಲು ಹೋದ ಕೋಡ್ಲಾದ ಉರಿಲಿಂಗ ಪೆದ್ದಿ ಮಠದ ಜ್ಞಾನಪ್ರಕಾಶ್ ಸ್ವಾಮೀಜಿ ಹಾಗೂ ಚಿತ್ರದುರ್ಗ ಛಲವಾದಿ ಸಮಾಜದ ಶಿವಾನಂದ್ ದೇವರು ಪೂಜ್ಯರಿಗೆ ಕಳೆದ 22ರಂದು ಪೋಲಿಸ್ ಅಧಿಕಾರಿಗಳು ಉದ್ದೇಶಪೂರ್ವಕವಾಗಿ ತಡೆದಿದ್ದು, ಆ ಪೋಲಿಸ್ ಅಧಿಕಾರಿಗಳ ಮೇಲೆ 24 ಗಂಟೆಯೊಳಗೆ ಅಟ್ರಾಸಿಟಿ ಪ್ರಕರಣ ದಾಖಲಿಸಿ, ಅವರನ್ನು ಅಮಾನತ್ತು ಹಾಗೂ ವಜಾಗೊಳಿಸಬೇಕು. ಇಲ್ಲದೇ ಹೋದಲ್ಲಿ ಸೇಡಂ ಬಂದ್, ರಸ್ತೆ ತಡೆ ಚಳುವಳಿ ರೂಪಿಸಬೇಕಾಗುತ್ತದೆ ಎಂದು ಬಿಜೆಪಿಯ ಮಾಜಿ ಶಾಸಕ ರಾಜಕುಮಾರ್ ಪಾಟೀಲ್ ತೆಲ್ಕೂರ್ ಅವರು ಎಚ್ಚರಿಸಿದರು.

ನಗರದ ಪತ್ರಿಕಾ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ವಾಮಿಗಳು ಶೋಷಿತ ಸಮುದಾಯದ ಪೀಠಾಧಿಪತಿಗಳೆಂದು ತಿಳಿದಿದ್ದರೂ ಸಹ, ಅಧಿಕಾರಿಗಳು ಸಾರ್ವಜನಿಕವಾಗಿ ಅವರನ್ನು ಅತ್ಯಂತ ಕೀಳಾಗಿ ನಡೆಸಿಕೊಂಡಿದ್ದಾರೆ. ಅವರು ಬಳಸಿದ ಪದಗಳು ಮತ್ತು ನಡೆದುಕೊಂಡ ರೀತಿ ಕೇವಲ ವ್ಯಕ್ತಿಯೊಬ್ಬನಿಗೆ ಮಾಡಿದ ಅವಮಾನವಲ್ಲ, ಬದಲಾಗಿ ಇಡೀ ದಲಿತ ಸಮುದಾಯಕ್ಕೆ ಮತ್ತು ಧಾರ್ಮಿಕ ಪೀಠಕ್ಕೆ ಮಾಡಿದ ಅಪಮಾನವಾಗಿದೆ. ಇದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯ್ದೆ 1989 ರ ಸೆಕ್ಷನ್ 3 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಜಾತಿ ಆಧಾರಿತ ತಾರತಮ್ಯ ಎಸಗಿದ ಪೊಲೀಸ್ ಅಧಿಕಾರಗಳ ಮೇಲೆ, ಮತ್ತು ಸ್ವಾಮಿಗಳಿಗೆ ಸಾರ್ವಜನಿಕವಾಗಿ ಅವಮಾನ ಮಾಡಿದ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ತಕ್ಷಣವೇ ಪ್ರಕರಣ ದಾಖಲಿಸಲು ಈಗಾಗಲೇ ಸೇಡಂ ಪೋಲಿಸ್ ಅಧಿಕಾರಿಗಳಿಗೆ ದೂರು ಸಲ್ಲಿಸಿದರೂ ಸಹ ಯಾವುದೇ ದೂರು ದಾಖಲಿಸಿಲ್ಲ ಎಂದುಅಸಮಾಧಾನವ್ಯಕ್ತಪಡಿಸಿದಅವರು,ಸಂವಿಧಾನಬದ್ಧವಾಗಿ ದಲಿತ ಸಮುದಾಯದ ಧಾರ್ಮಿಕ ಮುಖಂಡರಿಗೆ ಸಿಗಬೇಕಾದ ಗೌರವವನ್ನು ಕಸಿದುಕೊಂಡ ಅಧಿಕಾರಿಗಳನ್ನು ಕೂಡಲೇ ಸೇವೆಯಿಂದ ಅಮಾನತು ಮಾಡಬೇಕು. ಈ ಘಟನೆಯ ಬಗ್ಗೆ ಉನ್ನತ ಮಟ್ಟದ ತನಿಖೆಯಾಗಬೇಕು. ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕಠಿಣ ಕ್ರಮ ಕೈಗೊಳ್ಳದಿದ್ದಲ್ಲಿ, ದಲಿತಪರ ಸಂಘಟನೆಗಳು ಮತ್ತು ಭಕ್ತಾದಿಗಳ ವತಿಯಿಂದ ಬೃಹತ್ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು.

ಘಟನೆಯ ಹಿಂದೆ ಕೈವಾಡವಿದೆ ಎಂದು ದೂರಿದ ಅವರು, ಪ್ರತಿಯೊಂದಕ್ಕೂ ರಾಷ್ಟ್ರ, ಅಂತರಾಷ್ಟ್ರೀಯ ಮಟ್ಟದ ವಿಚಾರಗಳನ್ನು ಪ್ರಸ್ತಾಪಿಸುವ ಸಚಿವ ಪ್ರಿಯಾಂಕ್ ಖರ್ಗೆ ತಮ್ಮ ಜಿಲ್ಲೆಯ ಪರಿಶಿಷ್ಟ ಸಮುದಾಯದ ಸ್ವಾಮೀಜಿಗಳಿಗೆ ಪೋಲಿಸರು ಅವಮಾನಿಸಿದರೂ ಸಹ ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ. ಕೂಡಲೇ ಹೇಳಿಕೆಯನ್ನು ನೀಡಬೇಕು ಎಂದು ಅವರು ಒತ್ತಾಯಿಸಿದರು. ಘಟನೆಗೆ ಸಂಬಂಧಿಸಿದಂತೆ ಗೃಹ ಸಚಿವ ಡಾ. ಜಿ. ಪರಮೇಶ್ವರ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆಯವರು ಬಹಿರಂಗ ಕ್ಷಮೆ ಕೇಳಬೇಕು ಎಂದು ಅವರು ಆಗ್ರಹಿಸಿದರು. ನಂತರ ಬಿಜೆಪಿಯ ನಿಯೋಗವು ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಅಡ್ಡೂರು ಶ್ರೀನಿವಾಸಲು ಅವರಿಗೆ ಭೇಟಿ ಮಾಡಿ, ಪರಿಶಿಷ್ಟ ಸಮುದಾಯದ ಪೀಠಾಧಿಪತಿಗಳಿಗೆ ಅವಮಾನಿಸಿದ ಪೋಲಿಸ್ ಅಧಿಕಾರಿಗಳ ವಿರುದ್ಧ ಅಟ್ರಾಸಿಟಿ ಪ್ರಕರಣ ದಾಖಲಿಸಲು ಕೋರಿದರು.

ಸುದ್ದಿಗೋಷ್ಠಿಯಲ್ಲಿ ಧರ್ಮಣ್ಣ ಇಟಗಾ, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಡಾ. ಅಂಬಾರಾಯ್ ಅಷ್ಟಗಿ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಬಸವರಾಜ್ ಬೆಣ್ಣೂರ್, ಮಾಜಿ ಮೇಯರ್ ವಿಶಾಲ್ ದರ್ಗಿ, ಮಹಾದೇವ್ ಬೆಳಮಗಿ, ಶಿವಕುಮಾರ್ ತೋಟನಳ್ಳಿ, ರಾಮು ಕಣೇಕಲ್, ಶರಣು ಆರ್. ಶಂಕರ್, ರಾಣೋಜಿ ದೊಡ್ಡಮನಿ, ಓಂಪ್ರಕಾಶ್ ಪಾಟೀಲ್ ಮುಂತಾದವರು ಉಪಸ್ಥಿತರಿದ್ದರು.

# ಜೇವರ್ಗಿಯಲ್ಲಿ ಅಂಬೇಡ್ಕರ್ ಜಯಂತಿ: ಜ್ಞಾನಪ್ರಕಾಶ್ ಸ್ವಾಮೀಜಿಗೆ ಆಹ್ವಾನ..!



ಜೇವರ್ಗಿ: ಇದೇ ಮೇ 17ರಂದು ಪಟ್ಟಣದಲ್ಲಿ ಡಾ. ಬಿ. ಆರ್. ಅಂಬೇಡ್ಕರ್ ಅವರ ಜಯಂತಿ ಆಚರಣೆ ಮಾಡಲಾಗುತ್ತಿದ್ದು, ಆ ಹಿನ್ನೆಲೆಯಲ್ಲಿ ಉರಿಲಿಂಗ ಪೆದ್ದಿ ಮಠದ ಜ್ಞಾನಪ್ರಕಾಶ್ ಸ್ವಾಮೀಜಿ ಹಾಗೂ ಚಿತ್ರದುರ್ಗ ಛಲವಾದಿ ಸಮಾಜದ ಶಿವಾನಂದ್ ದೇವರು ಅವರಿಗೆ ಮುಖಂಡರು ಆಹ್ವಾನಿಸಿದರು.

ಬೆಂಗಳೂರಿನ ಕಾವೇರಿ ಅತಿಥಿ ಗೃಹದಲ್ಲಿ ಸ್ವಾಮೀಜಿಯವರಿಗೆ ಆಹ್ವಾನಿಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯರಾದ ಚಂದ್ರಶೇಖರ್ ಹರನಾಳ್, ಶಾಂತಪ್ಪ ಕೂಡಲಗಿ, ಜಯಂತ್ಯುತ್ಸವ ಸಮಿತಿಯ ಅಧ್ಯಕ್ಷ ಪುಂಡಲೀಕ್ ಗಾಯಕವಾಡ್, ಸುಭಾಷ್ ಚನ್ನೂರ್, ಮುಖಂಡರಾದ ಮಲ್ಲಣ್ಣ ಕೊಡಚಿ, ರಾಯಪ್ಪ ಬಾರಿಗಿಡ, ದೌಲಪ್ಪ ಮದನ್, ಹರಿಶ್ಚಂದ್ರ ಕೊಡಚಿ, ಮಹಾದೇವ್ ಕೋಳಕೂರ್, ಬೆಣ್ಣೆಪ್ಪ ಕೋಬಿನ್ ವಕೀಲರು, ರವಿ ಕುಳಗೇರಿ ಮುಂತಾದವರು ಉಪಸ್ಥಿತರಿದ್ದರು.

# ರಸ್ತೆ ಕಾಮಗಾರಿ ವಿಳಂಬ: ಸಚಿವ ಡಾ. ಶರಣಪ್ರಕಾಶ್ ಪಾಟೀಲ್ ಕ್ಷೇತ್ರದಲ್ಲಿ ಸವಾರರಿಗೆ ಪ್ರಾಣಸಂಕಟ..!



ಸೇಡಂ: ತಾಲ್ಲೂಕಿನ ಇಟ್ಕಲ್ ಗೇಟ್‌ನಿಂದ ಮೋತಕಪಲ್ಲಿ ಮಾರ್ಗವಾಗಿ ಮದನಾವರೆಗೆ ಹೋಸ ರಸ್ತೆ ಉದ್ಘಾಟನೆಗೊಂಡು ಒಂದು ವರ್ಷ ನಾಲ್ಕು ತಿಂಗಳು ಗತಿಸಿದರೂ ಇನ್ನೂ ಕಾಮಗಾರಿ ಪೂರ್ಣಗೊಳ್ಳದೆ ದಿನನಿತ್ಯ ಜೀವ ಕೈಯಲ್ಲಿ ಹಿಡಿದುಕೊಂಡು ಪ್ರಯಾಣಿಸುವ ಪರಿಸ್ಥಿತಿ ಎದುರಾಗಿದೆ. ದಿನನಿತ್ಯ ಸವಾರರು ಪ್ರಾಣಸಂಕಟವನ್ನು ಎದುರಿಸುತ್ತಿದ್ದಾರೆ.

ಮೋತಕಪಲ್ಲಿ ಜಾತ್ರಾ ಮಹೋತ್ಸವದ ಮುಂಚೆ ರಸ್ತೆ ಕಾಮಗಾರಿಯನ್ನು ಪೂರ್ಣಗೊಳಿಸಬೇಕಾಗಿತ್ತು, ಆದರೆ 8 ಕಿಮಿ ಸಹ ಪೂರ್ಣಗೋಳದೆ ಗುತ್ತಿಗೆದಾರರು ಮತ್ತು ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ರಸ್ತೆ ಕಾಮಗಾರಿ ಆಮೆಗತಿಯಲ್ಲಿ ಸಾಗುತ್ತಿದೆ. ದಿನನಿತ್ಯ ಹೆಚ್ಚಿನ ಸಂಖ್ಯೆಯಲ್ಲಿ ಈ ರಸ್ತೆಯಿಂದಲ್ಲೆ ಬೈಕ್ ಸವಾರರು, ಹಲವು ವಾಹನಗಳು, ಶಾಲಾ ಕಾಲೇಜು ವಿದ್ಯಾರ್ಥಿಗಳು, ಆಸ್ಪತ್ರೆ ಸೇರಿ ಇನ್ನಿತರ ಕೆಲಸಗಳಿಗೆ ತಾಲ್ಲೂಕಿನೆಲ್ಲೆಡೆ ತೆರಳಬೇಕಾದ ವೇಳೆ ಅಪಘಾತಗಳು ಸಂಭವಿಸುತ್ತಿದ್ದು, ಸಾವು, ನೋವುಗಳು ಸಹ ಆಗಿವೆ.

ಮುಂದಿನ ದಿನಗಳಲ್ಲಿ ಮಳೆ ಬರುವ ಸಾಧ್ಯತೆ ಇದ್ದು, ಸಾರ್ವಜನಿಕರು ಹಾಗೂ ಪಾದಚಾರಿಗಳು ಪ್ರಯಣಿಸುವುದು ಭಯದ ವಾತಾವರಣ ಕಂಡುಬರುತ್ತಿದ್ದು, ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಹೆಚ್ಚು ಗಮನ ಹರಿಸಿ ರಸ್ತೆ ಕಾಮಗಾರಿ ಪೂರ್ಣಗೊಳಿಸಿ, ಸಾರ್ವಜನಿಕರ ಪ್ರಯಾಣಕ್ಕೆ ಅನೂಕೂಲ ಮಾಡಬೇಕು ಎಂಬ ಆಗ್ರಹ ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿದೆ.

## ಕಲಬುರ್ಗಿ ಹಿಂದುಳಿದ ವರ್ಗಗಳ ಇಲಾಖೆಯಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರ

# ಸಚಿವ ಖರ್ಗೆ, ತಂಗಡಗಿ ಬಳಿಗೆ ಶೀಘ್ರ ಅರ್ಜುನ್ ಭದ್ರೆ ನಿಯೋಗ



ಕಲಬುರ್ಗಿ: ಜಿಲ್ಲೆಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಸತಿ ನಿಲಯಗಳಲ್ಲಿ ಬೋಗಸ್ ಬಿಲ್ ಮಾಡಿ ಕೋಟ್ಯಾಂತರ ಹಣ ಲೂಟಿ ಮಾಡಿದ್ದನ್ನು ಸಿಓ.ಡಿ ತನಿಖೆಗೆ ಒಪ್ಪಿಸಬೇಕು ಎಂದು ಒತ್ತಾಯಿಸಲು ನಿಯೋಗ ಅತೀ ಶೀಘ್ರದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಶಿವರಾಜ್ ತಂಗಡಗಿ ಅವರಿಗೆ ಭೇಟಿ ಮಾಡಿ ಒತ್ತಾಯಿಸಲಿದೆ ಎಂದು ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಚಾಲಕ ಅರ್ಜುನ್ ಭದ್ರೆ ಅವರು ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದೂಳಿದ ಸಮುದಾಯದ ವಿದ್ಯಾರ್ಥಿಗಳ ಶೈಕ್ಷಣಿಕ ಅನುಕೂಲಕ್ಕಾಗಿ ಜಿಲ್ಲೆಯಲ್ಲಿ ಒಟ್ಟು 142 ವಸತಿ ನಿಲಯಗಳಿರುತ್ತವೆ. ಬಹುತೇಕ ವಸತಿ ನಿಲಯಗಳಲ್ಲಿ ಊಟದ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯದ ಅನಾನುಕೂಲತೆ ಇರುತ್ತದೆ. ಆದರೆ ವಸತಿ ನಿಲಯಗಳಿಗೆ ವ್ಯವಸ್ಥೆಗೆ ಕೋಟ್ಯಾಂತರ ರೂಪಾಯಿಗಳ ಸುಳ್ಳು ದಾಖಲೆ ಮಾಡಿ ಹಣ ಎತ್ತಿ ಹಾಕಲಾಗಿದೆ ಎಂದು ದೂರಿದರು.

ವಸತಿ ನಿಲಯದಲ್ಲಿ ನೀರು ಶುದ್ದೀಕರಣಯಂತ್ರ ಇದ್ದರೂ, ಬೇರೆ ಕಡೆಯಿಂದು ನೀರು ತರಸಿದ ಹಾಗೆ ಬೀಲ್ ಮಾಡುತ್ತಾರೆ. ವಸತಿ ನಿಲಯದಲ್ಲಿರುವ 05ನೇ ತರಗತೆಯಿಂದ 19ರ. ತರಗತಿಯವರೆಗೆ ವಿದ್ಯಾರ್ಥಿಗಳಿಗೆ ಹಾಸಿಗೆ, ಹೋದಿಕೆ ಒಂದು ಸಲ ಖರೀದಿಸಿದರೆ ಮೂರು ವರ್ಷದವರೆನ ಬಳಕೆಯಾಗುತ್ತವೆ. ಮೂರು ವರ್ಷದ ನಂತರ ಹೊಸ ಹಾಸಿಗೆ. ಹೋದಿಕೆ ಖರೀದಿಸಬೇಕು. ಆದರೆ ಇ ಪ್ರತಿವರ್ಷ ಹಾಸಿಗೆ, ಹೊದಿಕೆ ಖರೀದಿಸಿದ ಹಾಗೆ ಬಿಲ್ ಹಾಕಿ ಹಣ ಲೂಟಿ ಮಾಡುತ್ತಾರೆ. ವಸತಿ ನಿಲಯಗ ಫ್ರೀಸ್ಟ್ ಖರೀದಿಸಿದ ಹಾಗೆ ಬಿಲ್ ಹಾಕುತ್ತಾರೆ. ಆದರೆ ವಸತಿ ನಿಲಯಗಳಲ್ಲಿ ಫ್ರಿಡ್ಜ್‌ಗಳೇ ಇಲ್ಲ ಎಂದು ಅವರು ಆರೋಪಿಸಿದರು.

ಕಬ್ಬಿಣದ ಮಂಚಗಳು ಮೂರು ವರ್ಷಕ್ಕೆ ಒಮ್ಮೆ ಖರೀದಿಸಬೇಕು. ಆದರೆ ಇವರು ಪ್ರತಿವರ್ಷ ಮಂಚಗಳು ಖರೀದಿಸಿದ ಹಾಗೆ ಬಿಲ್ ಹಾಕುತ್ತಾರೆ. ವಸತಿ ನಿಲಯದ ಪ್ರತಿವರ್ಷ ಸುಣ್ಣ–ಬಣ್ಣ ಹಚ್ಚದೇ ಸುಣ್ಣ–ಬಣ್ಣ ಬಳಸಿದ ಹಾಗೆ ಬಿಲ್ ಹಾಕುತ್ತಾರೆ. ವಸತಿ ನಿಲಯಗಳ ನವೀಕರಣದ ಹೆಸರಿನಲ್ಲಿ ಬೀಲ್ ಹಾಕುತ್ತಾರೆ. ವಸತಿ ನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ಕಂಪ್ಯೂಟರ ಖರೀದಿಸಲಾಗಿದೆ. ಆದರೆ ವಸತಿ ನಿಲಯಗಳಲ್ಲಿ ಕಂಪ್ಯೂಟರಗಳೆ ಇರುವುದಿಲ್ಲ. ಒಂದು ಕಂಪ್ಯೂಟರ್ ಮಾರ್ಕೆಟ್ ಬೆಲೆ 35,000ರೂ.ಗಳಾಗಿದೆ. ಆದರೆ ಇವರು ಒಂದು ಕಂಪ್ಯೂಟರ ಬೆಲ್ 95,000ರೂ.ಗಳ ಮೇಲ್ ಹಾಕುತ್ತಾರೆ. ವಸತಿ ನಿಲಯಗಳಿಗೆ ಒಂದು ಸಲ ಸಿ.ಸಿ. ಕ್ಯಾಮೆರಾ ಅಳವಡಿಸಿದರೆ ಅದು 05 ವರ್ಷ ನಡೆಯುತ್ತದೆ. ಆದರೆ ಇವರು ವಸತಿ ನಿಲಯಗಳಿಗೆ ಪ್ರತಿವರ್ಷ ಸಿ.ಸಿ. ಕ್ಯಾಮರಾ ಖರೀದಿಸಿದ ಬಿಲ್ ಹಾಕುತ್ತಾರೆ ಎಂದು ಅವರು ಗಂಭೀರವಾಗಿ ಆಪಾದಿಸಿದರು.

ವಸತಿ ನಿಲಯಗಳಿಗೆ ರೊಟ್ಟಿಯಂತ್ರ ಖರೀದಿಸಲಾಗಿದೆ. ಪ್ರತಿ ಯಂತ್ರದ ಬೆಲೆ 35,000ರೂ.ಗಳ ಬೆಲೆ ಇದೆ. ಇಷ್ಟು ಬೆಲೆ ಬಾಳುವ ಯಂತ್ರಗಳು ಖರೀದಿಸಿದರು ಅವುಗಳು ಚಾಲ್ತಿಯಲ್ಲಿರುವುದಿಲ್ಲ. ಒಬ್ಬ ವಸತಿ ನಿಲಯದ ವಾರ್ಡನ್ ವರ್ಗಾವಣೆಯಾಗಿ ಬೇರೆ ಸ್ಥಳಕ್ಕೆ ಹೋಗುವಾಗ ಸದರಿ ವಾರ್ಡನ ಚಾರ್ಜ ಕೊಡುವಾಗ ಅಡುಗೆ ಮಾಡುವ ಸಾಮಗ್ರಿಗಳ ಯಾದಿ ಕೊಡುವುದಿಲ್ಲ. ಮತ್ತೆ ಅಡುಗೆ ಸಾಮಾಗ್ರಿಗಳನ್ನು ಖರೀದಿಸಲಾಗುತ್ತದೆ. ಬಯೋ ಮೆಟ್ರಿಕ್ ವ್ಯವಸ್ಥೆ ಇದ್ದರೂ ಅದನ್ನು ಅಳವಡಿಸಿರುವುದಿಲ್ಲ. ಒಬ್ಬ ವಾರ್ಡನ 04 ವಸತಿ ನಿಲಯಗಳ ಚಾರ್ಜ ಕೊಡುತ್ತಾರೆ. ವಸತಿ ನಿಲಯಗಳಿಗೆ ಆಹಾರಧಾನ್ಯ ಸರಬರಾಜು ಮಾಡುವ ಗುತ್ತಿಗೆದಾರರು ಆಹಾರಧಾನ್ಯ ಸರಬರಾಜು ಮಾಡದೇ ನಿಲಯಪಾಲಕರಿಗೆ ಹಣಕೊಡುತ್ತಾದ ಆ ಹಣದಲ್ಲಿ ಕಳಪೆ ಮಟ್ಟದ ಆಹಾರಧಾನ್ಯ ಬಳಸಲಾಗುತ್ತದೆ. ಒಂದೇ ಸ್ಥಳದಲ್ಲಿ 10ರಿಂದ 15 ವರ್ಷಗಳಿ ಇದ್ದಾರೆ. ಇವರಿಗೆ ವರ್ಗಾವಣೆ ಆಗಿಲ್ಲ ಎಂದು ಅವರು ದೂರಿದರು.

ಕಲಬುರ್ಗಿಯಲ್ಲಿ ನಿಲಯ ಪಾಲಕರಾಗಿದ್ದ ಶರಣಬಸಪ್ಪಾ ಪಾಟೀಲ್ ಅವರಿಗೆ ನಿಯಮಬಾಹೀರವಾ ಕಲಬುರ್ಗಿ ತಾಲ್ಲೂಕು ಅಧಿಕಾರಿಯಾಗಿ ನಿಯೋಜನೆ ಮಾಡಿದರು. ಕರ್ತವ್ಯ ಲೋಪದಿಂದ ಇವರ ಅಮಾನತ್ತುಗೊಳಿಸಿದರು. ಮತ್ತೆ ಅವರಿಗೆ ಅಫಜಲಪುರ ತಾಲ್ಲೂಕು ಅಧಿಕಾರಿಯಾಗಿ ನಿಯೋಜನೆ ಮಾಡಲಾಗಿದೆ. ಇಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ತಾಲ್ಲೂಕು ಅಧಿಕಾರಿ ಶ್ರೀಮತಿ ಅನುಸುಯಾ ರಾಠೋಡ ಮತ್ತು ರಾಹುಲ್ ಕಲಬುರಗಿ ತಾಲ್ಲೂಕು ಕಚೇರಿ ಅಧೀಕ್ಷಕರು ಅವರಿಗೆ ಚಾರ್ಜ್ ತೆಗೆದುಕೊಳ್ಳದ ಹಾಗೆ ಭಯ ಹಾಕಿದ್ದಾರೆ. ಇಲಾಖೆ ಬಲಾಢ್ಯ ಸಮುದಾಯದಹಿಡಿತದಲ್ಲಿರುಒಟ್ಟಾರೆಯಾಗಿ ಕಲಬುರಗಿಯ ಹಿಂದೂಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಹುಚ್ಚರ ಮದುವೆ ಉಂಡವನೆ ಜಾಣ ಎಂಬಂತಾಗಿದೆ ಎಂದು ಅವರು ಕಟುವಾಗಿ ಟೀಕಿಸಿದರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಸತಿ ನಿಲಯಗಳಲ್ಲಿ ಜರುಗುತ್ತಿರುವ ಅವ್ಯವಸ್ಥೆ ಮತ್ತು ಹಗರಣಗಳು ಆಗುತ್ತಿರುವುದನ್ನು ಕಂಡು ನವೆಂಬರ್–2025ರಲ್ಲಿ ಲೋಕ ಉನ್ನತ ತಂಡ 10 ತಂಡಗಳನ್ನು ಮಾಡಿ ತಾಲ್ಲೂಕಿನ ಪ್ರತಿ ನಿಲಯಗಳಿಗೆ ಭೇಟಿ ಕೊಟು ಅವ್ಯವಸ್ಥೆಯನ್ನು ಪರಿಶೀಲಿಸಿ, ಇದರ ವರದಿಯನ್ನು ಉನ್ನತ ಅಧಿಕಾರಿಗಳಿಗೆ ಸಲ್ಲಿಸಲಾಗುವುದು ಎಂದು ಲೋಕಾಯುಕ್ತ ಎಸ್‌ಪಿ ಸಿದ್ದರಾಜು ಅವರು ಪತ್ರಿಕೆಗೆ ಹೇಳಿದರು ಆದ ಕ್ರಮ ಮಾತ್ರ ಏನು ಆಗಿಲ್ಲ. ಹಾಗಾಗಿ ಕ್ರಮಕ್ಕಾಗಿ ಸಚಿವರ ಬಳಿಗೆ ನಿಯೋಗ ಹೋಗಲಾಗುವುದು ಎಂದು ಅವರು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಹಾಂತೇಶ್ ಬಡದಾಳ್, ಮಲ್ಲಿಕಾರ್ಜುನ್ ಖನ್ನಾ, ಸೂರ್ಯಕಾಂತ್ ಆಜಾದಪೂರ್, ಮಹೇಶ್‌ಕೋಕಿಲಾಅವರುಉಪಸ್ಥಿತರಿದ್ದರು.

# ಎಸ್‌ಎಸ್‌ಎಲ್‌ಸಿ ಪರೀಕ್ಷೆ: ಕಲಬುರ್ಗಿ ಜಿಲ್ಲೆಗೆ ಸಾವಳಗಿ ವಿದ್ಯಾರ್ಥಿ ಗಣೇಶ್ ಟಾಪರ್..!



ಕಲಬುರ್ಗಿ: ಜಿಲ್ಲೆಯು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಕಳಪೆ ಫಲಿತಾಂಶ ಹೊಂದಿದ್ದರೂ ಸಹ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಕೊರತೆ ಏನಿಲ್ಲ ಎನ್ನುವ ರೀತಿಯಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಸಾವಳಗಿಯ ಅಜೀಮ್ ಪ್ರೇಮ್‌ಜಿ ಶಾಲೆಯ ವಿದ್ಯಾರ್ಥಿ ಗಣೇಶ್ ಬೋಸ್ಲೆ ಒಟ್ಟು 625 ಅಂಕಗಳಿಗೆ 623 ಅಂಕಗಳನ್ನು ಪಡೆಯುವ ಮೂಲಕ ಜಿಲ್ಲೆಯ ಟಾಪರ್ ಆಗಿ ಹೊರಹೊಮ್ಮಿದ್ದಾನೆ.

ನಗರದ ನ್ಯೂ ರಾಘವೇಂದ್ರ ಕಾಲೋನಿಯ ಸಹದೇವ್ ಬೋಸ್ಲೆ ಮತ್ತು ಗೀತಾ ದಂಪತಿಯ ಸುಪುತ್ರ ಗಣೇಶ್ ಇಂಗ್ಲೀಷ್ ಮತ್ತು ವಿಜ್ಞಾನ ವಿಷಯಗಳಲ್ಲಿ ತಲಾ ಒಂದೊಂದು ಅಂಕ ಕಡಿಮೆ ಪಡೆದಿದ್ದಾನೆ. ಆದಾಗ್ಯೂ, ಉತ್ತಮ ಫಲಿತಾಂಶವು ಆತನಿಗೆ ಜಿಲ್ಲೆಯ ಟಾಪರ್‌ನನ್ನಾಗಿಸಿದೆ. ಅದೇ ರೀತಿ ಎಸ್‌ಬಿಆರ್ ಶಾಲೆಯ ವಿದ್ಯಾರ್ಥಿನಿಯರಾದ ಮಾಧವಿ ಮತ್ತು ಮೇಘನಾ ಅವರು ತಲಾ 622 ಅಂಕಗಳನ್ನು ಪಡೆದು ಜಿಲ್ಲೆಗೆ ದ್ವಿತೀಯ ರ್‍ಯಾಂಕಗಳನ್ನು ಪಡೆದುಕೊಂಡಿದ್ದಾರೆ.

ಹರೀಶ್‌ಗೆ ಉತ್ತಮ ಅಂಕ: 2025–26 ನೇ ಸಾಲಿನ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆ–1ರಲ್ಲಿ ಸುಭಾಷ್ ಮೆಮೋರಿಯಲ್ ಆಂಗ್ಲ ಮಾಧ್ಯಮ ಶಾಲೆ, ಕಲಬುರಗಿಯ ವಿದ್ಯಾರ್ಥಿ ಕು. ಹರೀಶ್ ಸಿ.ಪೊದ್ದಾರ್ 597/625 (95.52%) ಅಂಕಗಳನ್ನು ಪಡೆದುಕೊಂಡು ಡಿಸ್ಟಿಂಕ್ಷನ್ ನಲ್ಲಿ ಉತ್ತೀರ್ಣನಾಗಿರುತ್ತಾನೆ.

ಕನ್ನಡ ವಿಷಯದಲ್ಲಿ 100/100 ಅಂಕ ಪಡೆದುಕೊಂಡಿರುತ್ತಾನೆ, ವಿದ್ಯಾರ್ಥಿಯ ಈ ಸಾಧನೆಗೆ ಶಾಲೆಯ ಶಿಕ್ಷಕರು ಹಾಗೂ ಕುಟುಂಬಸ್ಥರು ಹರ್ಷ ವ್ಯಕ್ತಪಡಿಸಿದ್ದಾರೆ ಎಂದು ವಿಕಾಸ ಜಿ. ಪಂಚಾಳ್ ಅವರು ತಿಳಿಸಿದ್ದಾರೆ.

# ಮಹಿಳೆಗೆ ಅನ್ಯಾಯ: ಕಲಬುರ್ಗಿ ಸುವರ್ಣ ಫೈನಾನ್ ಎದುರು ಏಪ್ರಿಲ್ 29ರಂದು ಕೃಷಿ ಕಾರ್ಮಿಕರ ಧರಣಿ



ಕಲಬುರ್ಗಿ: ನೊಂದ ಮಹಿಳೆ ಚನ್ನಮ್ಮಳ ಕುಟುಂಬಕ್ಕೆ ನ್ಯಾಯ ಒದಗಿಸುವಂತೆ ಹಾಗೂ ಬಡ್ಡಿಗೆ ಬಡ್ಡಿ ಚಕ್ರಬಡ್ಡಿ ಹಾಕುವುದು ಒತ್ತಾಯ ಪೂರ್ವಕವಾಗಿ ಸಾಲ ವಸೂಲಿ ಮಾಡುವ ಕ್ರಮವನ್ನು ತಡೆಯಬೇಕೆಂದು ಒತ್ತಾಯಿಸಿ ಇದೇ ಏಪ್ರಿಲ್ 29ರಂದು ನಗರದ ನೆಹರೂ ಗಂಜ್‌ದಲ್ಲಿರುವ ಸುವರ್ಣಾ ಫೈನಾನ್ಸ್ ಎದುರುಗಡೆ ಧರಣಿ ಸತ್ಯಾಗ್ರಹ ನಡೆಸಲು ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ಕೃಷಿ ಮತ್ತು ಗ್ರಾಮೀಣ ಕಾರ್ಮಿಕರ ಸಂಘದ ಅಧ್ಯಕ್ಷ ಭೀಮಶೆಟ್ಟಿ ಯಂಪಳ್ಳಿ ಅವರು ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದಲ್ಲಿ ಲೇವಾದೇವಿ ಸಂಸ್ಥೆಯವರ ಮತ್ತು ಅನೇಕ ಸಾಹುಕಾರರು ಮೀತಿಮೀರಿ ಬಡ್ಡಿಗೆ ಬಡ್ಡಿ ಚಕ್ರಬಡ್ಡಿ ವಸೂಲಿಮಾಡಿ ರಾಜಾರೋಷವಾಗಿ ಮೆರೆಯುತ್ತಿದ್ದಾರೆ ಬಡಕೂಲಿಕಾರರು ತಮ್ಮ ಸಂಕಷ್ಟದ ಸಮಯದಲ್ಲಿ ಅನಿರ್ವಾಯವಾಗಿ ಹೆಚ್ಚಿನ ಬಡ್ಡಿಯಂತೆ ಸಾಲಪಡೆದು ತಾವು ದಿನ ನಿತ್ಯ ದುಡಿದ್ದನ್ನು ಸಾಲದ ಬಡ್ಡಿಯನ್ನು ಕಟ್ಟಿ ಉಪವಾಸ ವನವಾಸ ಕಾಲ ಕಳೆಯುವಂತಾಗಿದೆ ಕೆಲವು ಸಂಘ ಸಂಸ್ಥೆಗಳು ಸ್ವಸಹಾಯ ಸಂಘಗಳ ಮಹಿಳೆಯರಿಗೆ ಸಾಲ ವಿತರಣೆ ಮಾಡಿ ಪ್ರತಿ ವಾರಕ್ಕೊಮ್ಮೆ ಪ್ರತಿ ತಿಂಗಳಿಗೊಮ್ಮೆ ಅತ್ಯಂತ ಕಠೋರ ರೀತಿಯಲ್ಲಿ ಒಂದು ತಾಸು ಅವಧಿ ಮೀರದ ರೀತಿಯಲ್ಲಿವಸೂಲಿ ಮಾಡುತ್ತಾರೆ ಹಣ ಕಟ್ಟಲು ಸ್ವಲ್ಪ ವಿಳಂಭವಾದರೆ ಓಣಿಯ ಜನರೆದು ರಂಬಾಮಾಡಿ ಮಾನ ಹರಾಜು ಮಾಡುತ್ತಾರೆಂದು ಭಯದ ವಾತಾವರಣದಲ್ಲಿ ಬಡಜನರು ಉಪಜೀವನ ಸಾಗಿಸುತ್ತಿದ್ದಾರೆ ಎಂದು ಕಳವಳ ವ್ಯಕ್ತಪಡಿಸಿದರು.

ನಗರದ ಸುಪರ್ ಮಾರ್ಕೆಟ್‌ನ ಮಕ್ತಂಪೂರ್ ವಾರ್ಡನ ನಿವಾಸಿ ಅಂಬರೀಶ್ ತಂದೆ ಬಸಯ್ಯ 2022ಮೇ ತಿಂಗಳ ಬಿಲ್ಡಿಗ್ ಮೇಲ್ಲಿಂದ ಬಿದ್ದು ಕಾಲುಮುರಿದಾಗ ಚಿಕಿತ್ಸೆಗೆ ಪಡೆಯಲು ತುರ್ತಾಗಿ ಹಣ ಬೇಕಾದಾಗ ಮನೆಯ ಹತ್ತಿರ ಇರುವ ಶಾಮಸುಂದರ್ ಪವಾರ್ ಸುವರ್ಣ ಫೈನಾನ್ಸ್ ಅವರ ಹತ್ತಿರ ಎರಡೂವರೆ ಲಕ್ಷ ರೂ.ಗಳ ಸಾಲ ಕೇಳಿದಾಗ ನೀವು ಬಂಗಾರ ಆಡವಿಟ್ಟರೆ ಮಾತ್ರ ಕೊಡುವದಾಗಿ ಹೇಳಿದ್ದರು. ಆಗ ಅಂಬರೀಶನ ಅಕ್ಕ ಚನ್ನಮ್ಮ ಗಂಡ ಕಸ್ತೂರಯ್ಯ 6 ತೋಲಿ ಬಂಗಾರ, ಸುನೀತಾ 4 ತೋಲಿ, ಅಂಬರೀಷನ 4 ತೊಲಿ, ಜ್ಯೋತಿ 4 ತೊಲಿ, ತಾಯಿ ಈರಮ್ಮ 2 ತೊಲಿ ಹೀಗೆ ಕುಟುಂಬದ ಜನರಿಂದ ಒಟ್ಟು 19 ತೋಲಿ ಬಂಗಾರವನ್ನು ಶಾಮಸುಂದರ್ ಪವಾರ್ ಅವರ ಹತ್ತಿರ ಆಡವಿಟ್ಟು ಶೇಕಡಾ 1ರಂತೆ ಬಡ್ಡಿ ಮಾತಾಡಿ ಸಾಲ ತೆಗೆದುಕೊಂಡಿದ್ದರು. ಎರಡು ವರ್ಷಗಳ ಕಾಲ ಪ್ರತಿ ತಿಂಗಳು ಬಡ್ಡಿ ಕೊಡಲಾಗಿದೆ. ನಂತರ ನಿಮ್ಮ ಹಣ ನಿಮಗೆ ಕೊಡುತ್ತವೆ. ನಮ್ಮ ಬಂಗಾರ ಕೊಡಿ ಎಂದು 2 ವರ್ಷಗಳಿಂದ ಚೆನ್ನಮ್ಮ ಅವರು ಕೇಳಿದರೂ ಸಹ ಅದನ್ನು ಮರಳಿ ಕೊಡದೇ ಪೋಲಿಸರ ಮೂಲಕ ಹೆದರಿಸುತ್ತಿದ್ದಾರೆ ಎಂದು ಅವರು ಆರೋಪಿಸಿದರು.

ಕಳೆದ ಒಂದು ತಿಂಗಳ ಹಿಂದೆ ಬ್ರಹ್ಮಪೂರ್ ಪೋಲಿಸ್ ಠಾಣೆಗೆ ಹೋಗಿ ದೂರು ಸಲ್ಲಿದಾಗ ಸರ್ಕಲ್ ಇನ್ಸಸ್ಪೆಕರ್ ಕರೆಸಿ ವಿಚಾರಿಸಿದಾಗ ನನ್ನ ಹತ್ತಿರ 11 ತೊಲಿ ಬಂಗಾರ ಇಟ್ಟಿದ್ದಾರೆ, 19 ತೊಲಿ ಅಲ್ಲ ಎಂದು ಹೇಳಿದ್ದರಲ್ಲದೆ ಬಂಗಾರ ಗೊತ್ತು ಹಿಡಿಯಿರಿ ಎಂದು ಬಂಗಾರದ ಕಂತೆ ಟೇಬಲ್ ಮೇಲೆ ಹಾಕಿದ್ದರು. ಅಂದು ರಾತ್ರಿ ಒಂಬತ್ತು ಗಂಟೆ ಯಾಗಿದ್ದರಿಂದ ಬೆಳಿಗ್ಗೆ ಬಂಗಾರ ಅಂಗಡಿಯವರಿಂದ ತೂಕ ಮಾಡಿಸಿ ಕೊಡುವದಾಗಿ ಹೇಳಿ ಹೋದರು. ಮಾರನೇ ದಿನ ಕಮೀಷನರ್ ಕಚೇರಿಯಿಂದ ಚನ್ನಮ್ಮನಿಗೆ ಪೋನ್ ಮಾಡಿ ನೀವು ಬರಬೇಕೆಂದು ಹೇಳಿದರು. ಅವರು ಕಮೀಷನರ್ ಕಚೇರಿಗೆ ಹೋದಾಗ ಅಲ್ಲಿನ ಅಧಿಕಾರಿಗಳು ಚನ್ನಮ್ಮನಿಗೆ ನಿಮ್ಮ ಮೇಲೆ ಕೇಸಾಗಿದೆ.

ನೀವು ನ್ಯಾಯಾಲಯಕ್ಕೆ ಹೋಗಿ ಎಂದು ಒಂದು ಬೇರೆಯವರ ಹೆಸರಿನ ಚಿಟಿಯನ್ನು ಕೊಟ್ಟರು ಎಂದು ಅವರು ದೂರಿದರು.

ಪೋಲಿಸ್ ಠಾಣೆಗೆ ಶಾಮಸುಂದರ್ ಅವರನ್ನು ಕರೆಸಿ ವಿಚಾರಣೆ ಮಾಡುವಾಗ ಚನ್ನಮ್ಮ ಫೋನಿನಲ್ಲಿ ಆಡಿಯೊಗಳು ಮಾಡಿದ್ದೆ. ಸಾಕ್ಷಿಗಳು ಮಾತ್ರ ಇವೆ. ಅಲ್ಲದೆ ಶಾಮಸುಂದರ್ ಪೋನ್ ಮಾಡಿ ನಮ್ಮ ಜೊತೆಗೆ ಮಾತಾಡಿದ ರೇಕಾರ್ಡಿಂಗ್ ಕೂಡ ಇವೆ. ಮನೆಯ ಹತ್ತಿರವಿರುವ ಶಾಮ ಸುಂದರ್ ಪವಾರ್ ಕಳೆದ ಇಪ್ಪತ್ತು ವರ್ಷಗಳಿಂದ ಆಗ ಆಗ ಮನೆಯ ಅಡಚಣೆಗೆ ಸಾಲ ಪಡೆದು ಮರಳಿ ಕೊಡಲಾಗಿದೆ. ಆದರೆ ಈಗ ತುರ್ತು ಪರಿಸ್ಥಿತಿಯಲ್ಲಿ ಅಡವಟ್ಟ 19 ತೋಲಿ ಬಂಗಾರನುಂಗಿ ಹಾಕುವ ಹುನ್ನಾರ ನಡೆಸಿದ್ದಾರೆ. ಆದ್ದರಿಂದ ಚನ್ನಮ್ಮನ ಕುಟುಂಬಕ್ಕೆ ನ್ಯಾಯ ಒದಗಿಸಬೇಕು ಎಂದು ಅವರು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ನಿಂಗಬಸಪ್ಪ ಅವರಳ್ಳಿ, ನೊಂದ ಮಹಿಳೆಯರಾದ ಚನ್ನಮ್ಮ, ಅಂಬರೀಷ್, ಈರಮ್ಮ, ಜ್ಯೋತಿ ಮುಂತಾದವರು ಉಪಸ್ಥಿತರಿದ್ದರು.

# ಜೆಡಿಎಸ್ ಜಿಲ್ಲಾಧ್ಯಕ್ಷ ಗುತ್ತೇದಾರ್ ಆಕ್ರೋಶ



ಕಲಬುರ್ಗಿ: ವಿದ್ಯಾರ್ಥಿ ಜೀವನದ ಪ್ರಮುಖ ಘಟ್ಟವಾದ ಎಸ್.ಎಸ್.ಎಲ್ ಸಿ ಫಲಿತಾಂಶ ಪ್ರಕಟವಾಗಿದ್ದು, 35 ಶೈಕ್ಷಣಿಕ ಜಿಲ್ಲೆಗಳ ಪೈಕಿ ಕಲಬುರ್ಗಿ ಕಟ್ಟಕಡೆಯ 35ನೇ ಸ್ಥಾನ ಪಡೆದಿದೆ. ಶಿಕ್ಷಣ ಸುಧಾರಣೆಗೆ ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಿಗಳಿಗೆ ಆಸಕ್ತಿ ಇಲ್ಲ ಎಂಬುದು ಕಾಣುತ್ತಿದ್ದೆ ಎಂದು ಜಿಲ್ಲಾ ಜೆಡಿಎಸ್ ಪಕ್ಷದ ಜಿಲ್ಲಾಧ್ಯಕ್ಷ ಬಾಲರಾಜ್ ಗುತ್ತೇದಾರ್ ಅವರು ಅಸಮಾಧಾನ ಹೊರಹಾಕಿದ್ದಾರೆ.ಪ್ರಮುಖವಾಗಿ ಹೆಚ್ಚಿನ ಪ್ರಮಾಣದಲ್ಲಿರುವ ಶಿಕ್ಷಕರ ಕೊರತೆಯು ಫಲಿತಾಂಶ ಪ್ರಮಾಣ ಕುಸಿಯಲು ಮುಖ್ಯ ಕಾರಣ ಶಿಕ್ಷಣ ಸುಧಾರಣೆಗೆ ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಿಗಳಿಗೆ ಆಸಕ್ತಿ ಇಲ್ಲ ಎಂಬುದು ಈ ಎಸ್ ಎಸ್ ಎಲ್ ಸಿ ಫಲಿತಾಂಶ ಸಾಬೀತುಪಡಿಸುತ್ತಿದೆ.ಒಂದುವೇಳೆಇಚ್ಛಾಶಕ್ತಿವಿದ್ದರೆ ಜಿಲ್ಲೆ ಕೊನೆ ಸ್ಥಾನದಲ್ಲಿ ಇರುತ್ತಿರಲಿಲ್ಲ. ಈ ಭಾಗದ ಜನಪ್ರತಿನಿಧಿಗಳು ಸಂಬಂಧವಿಲ್ಲದ ವಿಷಯ ಗಳನ್ನೆಲ್ಲ ಮಾತನಾಡುತ್ತಾರೆ. ಪ್ರಮುಖವಾಗಿ ಶೈಕ್ಷಣಿಕ ಸಮಸ್ಯೆಗಳ ಕುರಿತಾಗಿ ಧ್ವನಿ ಎತ್ತಿದ್ದೇ ಅಪರೂಪ. ಬರೀ ಬಾಯಿ ಮಾತಲ್ಲಿ ಶಿಕ್ಷಣ ಕ್ಷೇತ್ರ ಸುಧಾರಣೆ ಆಗಬೇಕು ಎಂದರೆ ಸಾಲದು. ಆಡಳಿತಾತ್ಮಕವಾಗಿ ಏನಾದರೂ ಬದಲಾವಣೆಗೆ ನಾಂದಿ ಹಾಡಬೇಕು ಎಂದು ಅವರು ಹೇಳಿಕೆಯಲ್ಲಿ ಒತ್ತಾಯಿಸಿದ್ದಾರೆ. ಈಗಾಲದರು ಶಿಕ್ಷಣ ಇಲಾಖೇ ಹಾಗೂ ಜಿಲ್ಲಾಡಳಿತ ಶಿಕ್ಷಕರ ನೇಮಕಾತಿ ಮಾಡಿಕೊಳ್ಳಬೇಕು ಹಾಗೂ ಎಸ್‌ಎಸ್‌ಎಲ್‌ಸಿ ಫಲಿತಾಂಶ ಸುಧಾರಣಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಅವರು ಒತ್ತಾಯಿಸಿದ್ದಾರೆ

# ವೀಣಾ ಎಸ್. ಜಲಾದೆಗೆ ಪಿಎಚ್‌ಡಿ ಪದವಿ

ಬೀದರ್: ಹೈದ್ರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಸಂಚಾಲಿತ ನಗರದ ಬಸವೇಶ್ವರ ಬಿ.ಎಡ್. ಕಾಲೇಜಿನ ಸಹಾಯಕ ಉಪನ್ಯಾಸಕಿ ವೀಣಾ ಎಸ್. ಜಲಾದೆ ಅವರಿಗೆ ವಿಜಯಪುರದ ಕರ್ನಾಟಕ ರಾಜ್ಯ ಅಕ್ಕ ಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ಪಿಎಚ್‌ಡಿ ನೀಡಿದೆ.ಪ್ರೊ. ವೆಂಕೋಬ ನಾರಾಯಣಪ್ಪ ಅವರ ಮಾರ್ಗದರ್ಶನದಲ್ಲಿ ಅವರು ಮಂಡಿಸಿದ 'ಎ ಸ್ಟಡಿ ಆಫ್ ಆಟಿಟ್ಯೂಡ್ ಆಫ್ ಬಿ.ಎಡ್ ಟ್ರೇನರ್ಸ್ ಟುವರ್ಡ್ ಪ್ರಾಕ್ಟೀಸ್ ಟೀಚಿಂಗ್ ಇನ್ ರಿಲೇಷನ್ ಟು ದೇರ್ ಅಡ್ಜಸ್ಟ್ಮೆಂಟ್ ಅಂಡ್ ಸ್ಟಡಿ ಹ್ಯಾಬಿಟ್' ಕುರಿತ ಪ್ರೌಢ ಪ್ರಬಂಧವನ್ನು ಪಿಎಚ್‌ಡಿಗೆ ಮಾನ್ಯ ಮಾಡಿದೆ.

# 625ಕ್ಕೆ 625 ಅಂಕ ಗಳಿಸಿದ ಪ್ರಾರ್ಥನಾಗೆ ಶಾಸಕ ಸವದಿ ಅಭಿನಂದನೆ



■ ಉದಯರಶ್ಮಿ ದಿನಪತ್ರಿಕೆ

ಅಥಣಿ: ತಾಲೂಕಿನ ಕಟಗೇರಿ ಗ್ರಾಮದ ಸರ್ಕಾರಿ ಕನ್ನಡ ಶಾಲೆಯ ವಿದ್ಯಾರ್ಥಿನಿ ಕುಮಾರಿ ಪ್ರಾರ್ಥನಾ ನಾಗಪ್ಪ ಬಿರಾದಾರ್ ಪಾಟೀಲ ಎಸ್–ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 625 ಅಂಕಗಳನ್ನು ಪಡೆಯುವ ಮೂಲಕ ಇಡೀ ರಾಜ್ಯಕ್ಕೆ ಮಾದರಿಯ ಸಾಧನೆ ಮಾಡಿದ್ದಾಳೆ. ಗ್ರಾಮೀಣ ಭಾಗದ ಸರ್ಕಾರಿ ಶಾಲೆಯಲ್ಲಿ ಓದಿ ಈ ಮಟ್ಟದ ಸಾಧನೆ ಮಾಡಿರುವ ಪ್ರಾರ್ಥನಾಳಿಗೆ ಈಗ ಎಲ್ಲೆಡೆಯಿಂದ ಅಭಿನಂದನೆಗಳ ಮಹಾಪೂರವೇ ಹರಿದು ಬರುತ್ತಿದೆ.

ವಿದ್ಯಾರ್ಥಿನಿಯ ಈ ಅಮೋಘ ಸಾಧನೆಯ ವಿಷಯ ತಿಳಿಯುತ್ತಿದ್ದಂತೆಯೇ ಬೆಂಗಳೂರಿನಲ್ಲಿದ್ದ ಅಥಣಿ ಶಾಸಕ ಹಾಗೂ ಮಾಜಿ ಉಪ ಮುಖ್ಯಮಂತ್ರಿ ಲಕ್ಷ್ಮಣ ಸವದಿ ಅವರು ಪ್ರಾರ್ಥನಾಳಿಗೆ ದೂರವಾಣಿ ಕರೆ ಮಾಡಿ ಹಾರೈಸಿದರು.

"ಗ್ರಾಮೀಣ ಭಾಗದ ಪ್ರತಿಭೆಗಳು ಈ ಮಟ್ಟಕ್ಕೆ ಬೆಳೆಯುತ್ತಿರುವುದು ಅಥಣಿ ತಾಲೂಕಿಗೆ ಹೆಮ್ಮೆಯ ವಿಷಯ. ಪ್ರಾರ್ಥನಾ ಅವರ ಈ ಸಾಧನೆ ಉಳಿದ ವಿದ್ಯಾರ್ಥಿಗಳಿಗೆ ಸ್ಫೂರ್ತಿಯಾಗಲಿ," ಎಂದು ಶಾಸಕರು ಮೆಚ್ಚುಗೆ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಅಥಣಿ ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಆರ್. ಮುಂಜಿ ಅವರು ವಿದ್ಯಾರ್ಥಿನಿಯ ಮನೆಗೆ ಭೇಟಿ ನೀಡಿ, ಸಿಹಿ ತಿನ್ನಿಸಿ ಸತ್ಕರಿಸಿದರು. "ಸರ್ಕಾರಿ ಶಾಲೆಯ ವಿದ್ಯಾರ್ಥಿನಿ ನೂರಕ್ಕೆ ನೂರು ಅಂಕ ಗಳಿಸಿರುವುದು ನಮ್ಮ ಇಲಾಖೆಗೆ ಮತ್ತು ತಾಲೂಕಿಗೆ ಸಂದ ಗೌರವ," ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ತಂದೆ ನಾಗಪ್ಪ ಬಿರಾದರ್ ಪಾಟೀಲ್, ತಾಯಿ ವಿನೋದ ಬಿರಾದಾರ ಪಾಟೀಲ್, ಸಮೂಹ ಸಂಪನ್ಮೂಲ ವ್ಯಕ್ತಿಗಳು ಸೇ–ರಿದಂತೆ ಹಲವರು ಉಪಸ್ಥಿತರಿದ್ದರು.

# ನಿರ್ದಿಷ್ಟ ಗುರಿಯೊಂದಿಗೆ ಅಭ್ಯಾಸ ಮಾಡಿ: ಡಿಸಿ ಡಾ. ಆನಂದ

## ವಿಜಯಪುರದ ಡಿಸಿ ಕಚೇರಿಯಲ್ಲಿ ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗಳಿಗೆ ಅಭಿನಂದನಾ ಸಮಾರಂಭ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ನಿರ್ದಿಷ್ಟ ಗುರಿ ಇಟ್ಟುಕೊಂಡು ಆ ದಿಶೆಯಲ್ಲಿ ಅಧ್ಯಯನಶೀಲರಾದರೆ ಖಂಡಿತಾ ಹೆಚ್ಚಿನ ಅಂಕ ಪಡೆದು ಉನ್ನತ ಹುದ್ದೆ ಅಲಂಕರಿಸಲು ಸಾಧ್ಯವಿದೆ ಎಂದು ಜಿಲ್ಲಾಧಿಕಾರಿಗಳಾದ ಡಾ. ಆನಂದ ಕೆ. ಅವರು ಹೇಳಿದರು.

ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉನ್ನತ ಸಾಧನೆ ಮಾಡಿದ ಜಿಲ್ಲೆಯ ವಿದ್ಯಾರ್ಥಿಗಳಿಗೆ ಇಲ್ಲಿನ ಜಿಲ್ಲಾಧಿಕಾರಿ ಕಚೇರಿಯಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭವನ್ನು ಉದ್ದೇಶಿಸಿ ಅವರು ಮಾತನಾಡಿದರು.

ನಿತ್ಯ ಅಭ್ಯಾಸದೊಟ್ಟಿಗೆ ಮಾನಸಿಕ ಹಾಗೂ ದೈಹಿಕ ಸಮತೋಲನ ಕಾಯ್ದುಕೊಂಡರೆ ಮುಖಬರುವ ದಿನಗಳಲ್ಲಿ ಉನ್ನತ ಸಾಧನೆ ಮಾಡಬಹುದಾಗಿದೆ ಎಂದ ಅವರು, ಇದೇ ವೇಳೆ ಸಾಧನೆ ಮಾಡಿದ ಸಾಧಕರು ಹಾಗೂ ಪೋಷಕರನ್ನು ಅಭಿನಂದಿಸಿದರು.

ಜಿಲ್ಲಾಪಂಚಾಯಿತಿಮುಖ್ಯಕಾರ್ಯನಿರ್ವಾಣಾಧಿಕಾ–ರಿಗಳಾದ ರಿಷಿ ಆನಂದ ಮಾತನಾಡಿ, ಕಳೆದ ವರ್ಷಕ್ಕಿಂತ ಪ್ರಸ್ತುತ ವರ್ಷದ ಎಸ್‌ಎಸ್‌ಎಲ್‌ಸಿ ಫಲಿತಾಂಶ ಸುಧಾ–ರಿಸಿದ್ದು ಸಂತಸದ ವಿಷಯ. ಈ ಒಂದು ಕಾರ್ಯದಲ್ಲಿ ಶ್ರಮಿಸಿದ ಇಲಾಖೆಯ ಎಲ್ಲಾ ಅಧಿಕಾರಿಗಳನ್ನು ವಿದ್ಯಾರ್ಥಿಗಳನ್ನು, ಪಾಲಕರನ್ನು ಅಭಿನಂದಿಸಿದರು.

ಪ್ರಸ್ತುತ ವರ್ಷ ಜಿಲ್ಲೆಯು ಇನ್ನೂ ಉನ್ನತ ಸಾಧನೆ ಮಾಡುವಂತೆ ಜೂನ್ ಪ್ರಾರಂಭದಿಂದಲೇ ಯೋಜನೆಗಳನ್ನು ಹಮ್ಮಿಕೊಳ್ಳಲು ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ಕಾರ್ಯಕ್ರಮದಲ್ಲಿ ರಾಜ್ಯ ಹಾಗೂ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದ ನಾಗರಬೆಟ್ಟ ಆಕ್ಸ್ ಫರ್ಡ್ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಸೌಜನ್ಯ ಬಸವರಾಜ ಕಂದಕೂರ, ನೇಹಾ ಪ್ರಭುಗೌಡ ಗುರಡ್ಡಿ, ಪೂಜಾ ಎಚ್ ಲಮಾಣಿ, ಜ್ಯೋತ್ಸಾ ಬಾಲಚಂದ್ರ ಪಾಟೀಲ, ಗಂಗಮ್ಮ ಅಶೋಕ ಕೋಳೂರ, ಸೌಪರ್ಣಿಕಾ ಸಂಗನಗೌಡ ಪಾಟೀಲ, ಸುಪ್ರೀತ ಎಸ್ ಪಾಟೀಲ,ಉಮೇರಾ ಮಹ್ಮದಸಾಬ ಉಸ್ತಾದ,ಎ,ಎ ತಾಂಬೆ, ಅರ್ಪಿತಾ ಮಡಿವಾಳಪ್ಪ ನಾಟೀಕರ ವಿದ್ಯಾರ್ಥಿಗಳನ್ನು ಜಿಲ್ಲಾಧಿಕಾರಿಗಳಾದ ಡಾ. ಆನಂದ ಕೆ. ಹಾಗೂ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಿಷಿ ಆನಂದ ಸನ್ಮಾನಿಸಿ ಅಭಿನಂದಿಸಿದರು.

ಕಾರ್ಯಕ್ರಮದಲ್ಲಿ ಶಿಕ್ಷಣ ಇಲಾಖೆಯ ಉಪನಿರ್ದೇಶಕ ವೀರಯ್ಯ ಸಾಲಿಮಠ, ಸೇರಿದಂತೆ ಇಲಾಖೆಯ ಅಧಿಕಾರಿಗಳು, ವಿದ್ಯಾರ್ಥಿಗಳ ಪಾಲಕರು, ಶಿಕ್ಷಕರು. ಶಾಲಾ ಆಡಳಿತ ಮಂಡಳಿಯ ಮತ್ತು ಎಸ್‌ಡಿಎಂಸಿ ಸದಸ್ಯರು ಪಾಲ್ಗೊಂಡಿದ್ದರು.

# ವಿದ್ಯಾರ್ಥಿಗಳ ಜೀವನ ಬಂಗಾರದ ಜೀವನ: ಕುರಂದವಾಡೆ



■ ಉದಯರಶ್ಮಿ ದಿನಪತ್ರಿಕೆ

ಬಬಲೇಶ್ವರ: ವಿದ್ಯಾರ್ಥಿ ಜೀವನ ಬಂಗಾರದಂತಹ ಜೀವನ, ಈ ಪುಣ್ಯ ನೆಲದ ಈ ಪ್ರೌಢ ಶಾಲೆಯಲ್ಲಿ ಕಲಿತ ಪ್ರತಿಯೊಬ್ಬರೂ ಉತ್ತಮ ಭವಿಷ್ಯ ಕಟ್ಟಿಕೊಂಡಿದ್ದಾರೆ ಎಂದು ವಿಶ್ರಾಂತ ಪ್ರಾಚಾರ್ಯ ಜೆ.ಜೆ. ಕುರಂದವಾಡೆ ಹೇಳಿದರು.

ಬಬಲೇಶ್ವರ ಪಟ್ಟಣದ ಶಾಂತವೀರ ಪ್ರೌಢ ಶಾಲೆ ಸೋಮವಾರ ನಡೆದ 1999–2000 ನೇ ಸಾಲಿನ ಎಸ್. ಎಸ್. ಎಲ್. ಸಿ. ವಿದ್ಯಾರ್ಥಿಗಳ ಗುರುವಂದನಾ ಹಾಗೂ ಸ್ನೇಹ ಸಮ್ಮಿಲನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಶ್ರೀಲಕ್ಷ್ಮೀ ನರಸಯ್ಯ ರಾಜಶಾಸ್ತ್ರದ ವಿಶ್ರಾಂತ ಶಿಕ್ಷಕ ಮಾತನಾಡಿ ವಿದ್ಯಾರ್ಥಿ ಜೀವನದಲ್ಲಿ ತಾವು ಕಷ್ಟ ಪಟ್ಟು ಓದಿ ಈ ಹಂತಕ್ಕೆ ಬಂದಿದ್ದೀರಿ ನಾವು ನಿಮ್ಮೆಲ್ಲರ ಉತ್ತಮ ಸ್ಥಿತಿ ನೋಡಿ ತುಂಬಾ ಸಂತಸವಾಗಿದೆ ಎಂದರು.

ಹಿಂದಿ ವಿಷಯದ ವಿಶ್ರಾಂತ ಶಿಕ್ಷಕ ಎಸ್. ಡಿ. ಗಡದೆ ಮಾತನಾಡಿ, ಕಬೀರದಾಸ ಹಾಗೂ ತುಳಸಿದಾಸರ ದೋಹೆಗಳು ಅಂದಿಗೂ ಇಂದಿಗೂ ಎಂದೆಂದಿಗೂ ಪ್ರಸ್ತುತವಾಗಿವೆ ನಿಮ್ಮೆಲ್ಲರ ಜೀವನ ಇನ್ನೂ ಉತ್ತಮವಾಗಲಿ ಎಂದು ವಿದ್ಯಾರ್ಥಿಗಳಿಗೆ ಹಾರೈಸಿದರು. ಸಾನಿಧ್ಯ ವಹಿಸಿದ ಬಬಲೇಶ್ವರ ಬ್ರಹನ್ಮಠದ ಮಹಾದೇವ ಶಿವಾಚಾರ್ಯ ಮಹಾಸ್ವಾಮಿಗಳು ಆಶೀರ್ವಚನ ನೀಡಿದರು.

ರುದ್ರಗೌಡ ಬಿರಾದಾರ, ಸಂಸ್ಥೆಯ ಕಾರ್ಯದರ್ಶಿ ವಿ.ಎನ್ ಬಿರಾದಾರ,ವಿ.ಎಂ. ಬಿಳ್ಳೂರ, ಬಿ.ಎಸ್. ಅಳಗಿ, ಬಿ. ಡಿ. ತೆನಹಳ್ಳಿ, ವಿ. ಬಿ. ಮಠ, ಪಿ.ಎಸ್. ಗುಡ್ಡೇವಾಡಿ, ಎಸ್. ವಿ. ಬಿರಾದಾರ, ಎಂ. ಎಸ್. ತಮಂಡ, ಜಿ.ಕೆ. ಕೆಣಟಿಜಜಜಿಟಿಜಜಟ್ಯಾಳ, ಎಸ್. ಆರ್. ನರೂಟಿ, ಐ. ಎಸ್. ಹುಂಡೇಕಾರ, ಎನ್. ಲಕ್ಷ್ಮಿ ನರಸಯ್ಯ, ಕೆ.ಕೆ. ಚಲವಾದೀ, ಎಸ್. ಡಿ.ಗಡದೆ ಇದ್ದರು.

ಲಕ್ಷ್ಮಿ ಬಿರಾದಾರ ಪ್ರಾರ್ಥಿಸಿದರು, ಸಂಗಪ್ಪ ದಂದರಗಿ ಹಾಗೂ ಲಕ್ಷ್ಮಿ ನಾಗನೂರ ಸ್ವಾಗತಿಸಿದರು, ಬಸವರಾಜ ಪಾಟೀಲ್ ವಂದಿಸಿದರು. ಶ್ರೀಕಾಂತ್ ಬಿ. ಎಂ. ಕಾರ್ಯಕ್ರಮವನ್ನು ನಿರೂಪಿಸಿದರು.

# ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗದ ಅಧ್ಯಕ್ಷರು, ಸದಸ್ಯರ ಜಿಲ್ಲಾ ಪ್ರವಾಸ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗದ ಅಧ್ಯಕ್ಷ ಡಾ. ಮೂರ್ತಿ ಎಲ್. ಸದಸ್ಯರಾದ ಎಂ.ಹುಂಬಯ್ಯ, ಸುನೀಲ್ ಎಂ ಉಕ್ಕಲಿ, ಎನ್.ದಿವಾಕರ್ ಮತ್ತು ಗೀತಾ ಥಾಂವಶಿ ಹಾಗೂ ಕಾರ್ಯದರ್ಶಿ ಡಾ. ಎಚ್.ಎಸ್. ಶಿವರಾಮು ಏ. 28 ರಂದು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದಾರೆ.

ಏ. 27 ರಂದು ಸಂಜೆ ಬೆಳಗಾವಿಯಿಂದ ವಿಜಯಪುರಕ್ಕೆ ಆಗಮಿಸುವರು. ಏ. 28 ರಂದು ಬೆಳಗ್ಗೆ 10.20 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಜಿಲ್ಲಾ ಪಂಚಾಯತ ಸಭಾಭವನದಲ್ಲಿ ಜರುಗುವ ಸಭೆಯಲ್ಲಿ ಸರ್ಕಾರದ ಎಲ್ಲ ಇಲಾಖೆಗಳಿಗೆ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗಗಳ ಜನಾಂಗಕ್ಕೆ ಅನುದಾನ ವಿತರಣೆಯಾಗಿರುವ ಮತ್ತು ಜನರ ಕುಂದುಕೊರತೆಗಳ ಬಗ್ಗೆ ಪರಿಶೀಲಿಸಲಿದ್ದಾರೆ.

ಮಧ್ಯಾಹ್ನ 3 ಗಂಟೆಯಿಂದ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆಯಲ್ಲಿ ಭಾಗವಹಿಸುವರು. ಏ. 29 ರಂದು ವಿಜಯಪುರದಿಂದ ಕಲಬುರಗಿಗೆ ಪ್ರಯಾಣ ಬೆಳೆಸುವರು ಎಂದು ಪ್ರಕಟಣೆ ತಿಳಿಸಿದೆ.

ಈ ಸಭೆಯಲ್ಲಿ ಜಿಲ್ಲೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿವಿಧ ಸಂಘಟನೆ ಮುಖಂಡರುಗಳು ಮತ್ತು ಸಂಘ ಸಂಸ್ಥೆ ಪದಾಧಿಕಾರಿಗಳು ಹಾಜರಾಗಬಹುದಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಎಸ್ಸೆಸ್ಸೆಲ್ಸಿ: ಕಲಕೇರಿ ಆದರ್ಶ ಪ್ರೌಢಶಾಲೆಗೆ ಉತ್ತಮ ಫಲಿತಾಂಶ

■ ಉದಯರಶ್ಮಿ ದಿನಪತ್ರಿಕೆ





ಕಲಕೇರಿ: ಗ್ರಾಮದ ಆದರ್ಶ ಆಂಗ್ಲ ಮತ್ತು ಕನ್ನಡ ಮಾಧ್ಯಮ ಪ್ರೌಢಶಾಲೆಯ ವಿದ್ಯಾರ್ಥಿಗಳು 2026ನೇ ಸಾಲಿನ ಎಸ್–ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ.

ಆಂಗ್ಲ ಮಾಧ್ಯಮದ ಕುಮಾರಿ ಆರೀಫಾ ಮುಲ್ಲಾ 618 (98.88%) ಪ್ರಥ–ಮ ಸ್ಥಾನ ಪಡೆದಿದ್ದು, ಕುಮಾರಿ ಸುಹಾನಾ ಸಿ. 607 (97.12%) ದ್ವಿತೀಯ ಸ್ಥಾನ ಹಾಗೂ ಕುಮಾರಿ ಭೂಮಿಕಾ ದಿಗ್ಗಾಂವಿ 604 (96.64%) ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ. ಪರೀಕ್ಷೆಗೆ ಆಂಗ್ಲ ಮಾಧ್ಯಮದ ಒಟ್ಟು 94 ವಿದ್ಯಾರ್ಥಿಗಳು ಹಾಜರಾಗಿದ್ದು ಅದರಲ್ಲಿ 36 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ, 44 ವಿದ್ಯಾರ್ಥಿಗಳು ಪ್ರಥಮಶ್ರೇಣಿ, 08 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿ ಹಾಗೂ 06 ವಿದ್ಯಾರ್ಥಿಗಳು ತೃತೀಯ ಶ್ರೇಣಿಯಲ್ಲಿ ಪಾಸಾಗಿದ್ದು, ಕನ್ನಡ ಮಾಧ್ಯಮದ ಪರೀಕ್ಷೆಗೆ ಹಾಜರಾದ ಒಟ್ಟು 40 ವಿದ್ಯಾರ್ಥಿಗಳಲ್ಲಿ 12 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ, 19 ವಿದ್ಯಾರ್ಥಿಗಳು ಪ್ರಥಮಶ್ರೇಣಿ, 08 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿ ಹಾಗೂ 01 ವಿದ್ಯಾರ್ಥಿ ತೃತೀಯ ಶ್ರೇಣಿಯಲ್ಲಿ ಪಾಸಾಗಿದ್ದು, ಶಾಲೆಯ ಒಟ್ಟು ಪಲಿತಾಂಶ ಶೇ.100 ರಷ್ಟಾಗಿದೆ. ವಿದ್ಯಾರ್ಥಿಗಳ ಸಾಧನೆಗೆ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರು, ಮುಖ್ಯಗುರುಗಳು ಸೇರಿದಂತೆ ಶಾಲೆಯ ಸಿಬ್ಬಂದಿ ವರ್ಗ ಮೆಚ್ಚುಗೆ ವ್ಯಕ್ತಪಡಿಸಿ ವಿದ್ಯಾರ್ಥಿಗಳಿಗೆ ಶುಭಕೋರಿದ್ದಾರೆ.

# ಕೇಂದ್ರಕ್ಕೆ ಲಿಂಗಾಯತ ಧರ್ಮ ಕುರಿತು ಮರು ಮೇಲ್ಮನವಿ ಸಲ್ಲಿಸಲು ಆಗ್ರಹ

## ಮಹಿಳಾ ವಿವಿಯಲ್ಲಿ ಬಸವ ಅಧ್ಯಯನ ಪೀಠ ಪೂರ್ಣ ಪ್ರಮಾಣದಲ್ಲಿ ಸ್ಥಾಪನೆಯಾಗಬೇಕು । ಶುಭ್ರ ವಸ್ತ್ರಧಾರಿಣಿ ಅಕ್ಕಮಹಾದೇವಿ ಪುತ್ಥಳಿ ನಿಲ್ಲಿಸಬೇಕು । ಬಸವ ತಿಳಿವಳಿಕೆ ಕೇಂದ್ರದ ಅಧ್ಯಕ್ಷ ಡಾ.ಶಶಿಕಾಂತ ಪಟ್ಟಣ & ಪದಾಧಿಕಾರಿಗಳಿಂದ ಜಿಲ್ಲಾಧಿಕಾರಿಗೆ ಮನವಿ

■ ಉದಯರಶ್ಮಿ ದಿನಪತ್ರಿಕೆ




ವಿಜಯಪುರ: ಲಿಂಗಾಯತ ಧರ್ಮಕ್ಕೆ ಮಾನ್ಯತೆ ಹಾಗೂ ಅಲ್ಪಸಂಖ್ಯಾತ ಸ್ಥಾನಮಾನ ನೀಡುವುದು ಸೇ–ರಿದಂತೆ ಹಲವು ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಬಸವ ತಿಳಿವಳಿಕೆ ಮತ್ತು ಸಂಶೋಧನಾ ಕೇಂದ್ರದ ಅಧ್ಯಕ್ಷ ಡಾ.ಶಶಿಕಾಂತ ಪಟ್ಟಣ ನೇತೃತ್ವದಲ್ಲಿ ಪದಾಧಿಕಾರಿಗಳು, ಸದಸ್ಯರು ಶುಕ್ರವಾರ ಜಿಲ್ಲಾಧಿಕಾರಿ ಡಾ.ಆನಂದ್ ಕೆ. ಅವ–ರಿಗೆ ಮನವಿ ಸಲ್ಲಿಸಿದರು.

ಈ ವೇಳೆ ಮಾತನಾಡಿದ ಪುಣೆಯ ಬಸವ ತಿಳುವಳಿಕೆ ಮತ್ತು ಸಂಶೋಧನಾ ಕೇಂದ್ರದ ಅಧ್ಯಕ್ಷ ಡಾ.ಶಶಿಕಾಂತ ಪಟ್ಟಣ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನ್ಯಾಯಮೂರ್ತಿ ನಾಗಮೋಹನದಾಸ ವರದಿಯಾಧಾರಿತ ತಮ್ಮ ಹಿಂದಿನ ಸರಕಾರದ ಶಿಫಾರಸನ್ನು ಸದೃಡಗೊಳಿಸಿ ಲಿಂಗಾಯತ ಧರ್ಮೀಯರನ್ನು ಅಲ್ಪಸಂಖ್ಯಾತ ಎಂದು ಪರಿಗಣಿಸಲು ಮತ್ತೆ ಕೇಂದ್ರ ಸರ್ಕಾರಕ್ಕೆ ಮರು ಮೇಲ್ಮನವಿ ಸಲ್ಲಿಸಿ ಬಸವಣ್ಣನವರಿಗೆ, ಲಿಂಗಾಯತರಿಗೆ ನ್ಯಾಯ ಒದಗಿಸಬೇಕೆಂದು ಆಗ್ರಹಿಸಿದರು.

ನಗರದಲ್ಲಿರುವ ನಾಡಿನ ಏಕಮೇವ ಮಹಿಳಾ ವಿಶ್ವವಿದ್ಯಾಲಯದಲ್ಲಿ ಬಸವ ಅಧ್ಯಯನ ಪೀಠವನ್ನು ಪೂರ್ಣ ಪ್ರಮಾಣದಲ್ಲಿ ಸ್ಥಾಪಿಸಿ ಹೆಚ್ಚಿನ ಆರ್ಥಿಕ ಅನುದಾನವನ್ನು ನೀಡಿ ಶರಣ ಸಾಹಿತ್ಯದ ಸಂಶೋಧನೆ, ಪರಿಷ್ಕರಣೆ ಪ್ರಕಟಣೆಗೆ ತ್ವರಿತವಾಗಿ ಕಾರ್ಯ ರೂಪಿಸಬೇಕು. ಅಲ್ಲದೆ, ದಿಟ್ಟ ಶರಣೆ ಅಕ್ಕಮಹಾದೇವಿ ಶರಣ ಸಂಕುಲದ ಶ್ರೇಷ್ಠ ಅನುಭಾವಿಯಾಗಿದ್ದು, ಅವಳು ಅರೆಬೆತ್ತಲೆಯಾಗಿ ಬಂದಿಲ್ಲ ಎನ್ನುವುದಕ್ಕೆ ಹಲವು ಉಲ್ಲೇಖ, ಪುರಾವೆಗಳಿದ್ದು ಅಕ್ಕಮಹಾದೇವಿಯನ್ನು ಹೀಗೆ ಅರೆಬೆತ್ತಲೆಯಾಗಿ ಚಿತ್ರಿಸಿ ಹೆಣ್ಣು ಕುಲಕ್ಕೆ, ನಾಗರಿಕ ಸಮಾಜವು ತಲೆತಗ್ಗಿಸುವಂತೆ ಆಗಿದೆ. ಕಾರಣ ಅಕ್ಕಮಹಾದೇವಿ ವಿವಿಯಲ್ಲಿರುವ ಅರೆಬೆತ್ತಲೆ ಪುತ್ಥಳಿ ತೆರವುಗೊಳಿಸಿ ಆ ಸ್ಥಳದಲ್ಲಿ ಶುಭ್ರ ವಸ್ತ್ರಧಾರಿಣಿ ಅಕ್ಕಮಹಾದೇವಿ ಪುತ್ಥಳಿ ನಿಲ್ಲಿಸಬೇಕು ಎಂದು ಡಾ.ಪಟ್ಟಣ ಒತ್ತಾಯಿಸಿದರು.

ಈ ವಿಷಯವಾಗಿ ಈ ಹಿಂದೆ ಹೋರಾಟ ನಡೆಸಿ, ಮನವಿ ಸಲ್ಲಿಸಿದರೂ ಸಹ ಯಾವುದೇ ಪ್ರಯೋಜನವಾಗಿಲ್ಲ. ಈಗಲೂ ತಮ್ಮ ಬೇಡಿಕೆಗಳಿಗೆ ಸ್ಪಂದಿಸದಿದ್ದರೆ ಹೋರಾಟದ ಹಾದಿ ತುಳಿಯಬೇಕಾಗುತ್ತದೆ ಎಂದು ಪದಾಧಿಕಾರಿಗಳು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಡಾ.ಸರಸ್ವತಿ ಪಾಟೀಲ, ರೇಣುಕಾ ಪಾಟೀಲ, ಆರ್.ಎಸ್. ಬಿರಾದಾರ, ರತ್ನಕ್ಕ ಬಿರಾದಾರ, ಸಿದ್ದಪ್ಪ ಪಡನಾಡ, ಉದ್ಯಮಿ ಗಂಗಾಧರ ಸಾಲಕ್ಕಿ, ಶರಣು ಸಬರದ, ಆರ್.ಎಸ್.ಪಾಟೀಲ, ಮಲ್ಲಿಕಾರ್ಜುನ ಮುರಗೋಡ, ಸಂಖ ಸರ್, ಶೈಲಾ ಇಂದುಶೇಖರ ಮಣೂರ, ಡಾ.ಶಾರದಾಮಣಿ ಹುಣಶ್ಯಾಳ, ರೇಖಾ ಬಿರಾದಾರ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

# ಎಸ್ಸೆಸ್ಸೆಲ್ಸಿ ಪರೀಕ್ಷೆಯಂತೆ ಪಿಯುಸಿಯಲ್ಲೂ ಅತ್ಯುತ್ತಮ ಸಾಧನೆ ಮಾಡಿ

## ವಿಜಯಪುರದಲ್ಲಿ ಎಸ್.ಎಸ್.ಎಲ್.ಸಿಯಲ್ಲಿ ವಿಜಯಪುರ ಗ್ರಾಮೀಣ ವಲಯಕ್ಕೆ ಪ್ರಥಮ ಮತ್ತು ರಾಜ್ಯಕ್ಕೆ 7ನೇ ಸ್ಥಾನ ಪಡೆದ ಮೂರು ವಿದ್ಯಾರ್ಥಿಗಳನ್ನು ಸನ್ಮಾನಿಸಿದ ಎಂಎಲ್ಸಿ ಸುನೀಲಗೌಡ ಪಾಟೀಲ ಕರೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: 10ನೇ ತರಗತಿ ವಾರ್ಷಿಕ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿರುವ ವಿದ್ಯಾರ್ಥಿಗಳು ದೊಡ್ಡ ಗು–ರಿಯೊಂದಿಗೆ ಪಿಯುಸಿ ಪರೀಕ್ಷೆಗಳಲ್ಲಿ ಅತ್ಯುತ್ತಮ ಸಾಧನೆ ಮಾಡಬೇಕು ಎಂದು ವಿಧಾನ ಪರಿಷತ್ ಶಾಸಕ ಸುನೀಲಗೌಡ ಪಾಟೀಲ ಕರೆ ನೀಡಿದ್ದಾರೆ.

ಶುಕ್ರವಾರ ನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಎಸ್. ಎಸ್. ಎಲ್. ಸಿ ಪರೀಕ್ಷೆಯಲ್ಲಿ ವಿಜಯಪುರ ಗ್ರಾಮೀಣ ವಲಯಕ್ಕೆ ಪ್ರಥಮ ಮತ್ತು ರಾಜ್ಯಕ್ಕೆ 7ನೇ ಸ್ಥಾನ ಪಡೆದ ಮೂರು ವಿದ್ಯಾರ್ಥಿಗಳನ್ನು ಸನ್ಮಾನಿಸಿ ಅವರು ಮಾತನಾಡಿದರು.

ಎಸ್.ಎಲ್.ಎಲ್.ಸಿ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಸಾಧನೆಯ ಮೂಲಕ ಜಿಲ್ಲೆಗೆ ಕೀರ್ತಿ ತಂದಿದ್ದೀರಿ. ಮುಂಬರುವ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಇನ್ನೂ ಹೆಚ್ಚಿನ ಸಾಧನೆ ಮಾಡಬೇಕು. ಈ ಮೂಲಕ ಉತ್ತರೋತ್ತರವಾಗಿ ಸಾಧನೆಯ ಶಿಖರ ತಲುಪಬೇಕು ಎಂದು ಶಾಸಕರು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಈ ವೇಳೆ 626ಕ್ಕೆ ತಲಾ 619 ಅಂಕ ಗಳಿಸಿ ರಾಜ್ಯಕ್ಕೆ 7ನೇ ಮತ್ತು ವಿಜಯಪುರ ಗ್ರಾಮೀಣ ವಲಯಕ್ಕೆ ಪ್ರಥ–ಮ ಸ್ಥಾನ ಪಡೆದಿರುವ ವಿದ್ಯಾರ್ಥಿಗಳಾದ ಹೊನ್ನುಟಗಿ ಸರಕಾರಿ ಪ್ರೌಢಶಾಲೆಯ ಅರ್ಪಿತ ನಾಟೀಕಾರ, ಹೊಳೆ ಹಂಗರಗಿ ಕಲ್ಮೇಶ್ವರ ಪ್ರೌಢಶಾಲೆಯ ರಮೇಶ ತೇಲಿ ಹಾಗೂ ಇಟ್ಟಂಗಿಹಾಳ ಎಕ್ಸಲೆಂಟ್ ಆಂಗ್ಲ ಮಾಧ್ಯಮ ಶಾಲೆಯ ಚೈತ್ರಾ ಬಿರಾದಾರ ಅವರನ್ನು ಸುನೀಲಗೌಡ ಪಾಟೀಲ ಅವರು ಸನ್ಮಾನಿಸಿ ಗೌರವಿಸಿದರು.

ಈ ಸಂದರ್ಭದಲ್ಲಿ ವಿಜಯಪುರ ಗ್ರಾಮೀಣ ಬಿಇಓ ಬಸವರಾಜ ಎಸ್. ತಳವಾರ, ಶಿಕ್ಷಣ ಸಂಯೋಜಕರಾದ ವಸಂತ ಚವ್ಹಾಣ, ಎಸ್. ಎಂ. ಕಾಗವಾಡ, ವಿದ್ಯಾರ್ಥಿಗಳ ಪೋಷಕರು, ಶಾಲೆಗಳ ಪ್ರಾಚಾರ್ಯರು ಉಪಸ್ಥಿತರಿದ್ದರು.



# ಎಸ್ಸೆಸ್ಸೆಲ್ಸಿ: ಆಲಮಟ್ಟಿ ಎಂಎಚ್‌ಎಂ ಶಾಲೆಗೆ ಶೇ.97.59 ಫಲಿತಾಂಶ

■ ಉದಯರಶ್ಮಿ ದಿನಪತ್ರಿಕೆ






ಆಲಮಟ್ಟಿ: ಪ್ರಸಕ್ತ 2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆ–1ರಲ್ಲಿ ಸ್ಥಳೀಯ ಎಸ್.ವಿ.ವಿ. ಸಂಸ್ಥೆಯ ಮಂಜಪ್ಪ ಹರ್ಡೇಕರ ಸ್ಮಾರಕ ಸಂಯುಕ್ತ ಪದವಿಪೂರ್ವ ಕಾಲೇಜಿನ ಎಂ–ಎಚ್‌ಎಂ ಪ್ರೌಢಶಾಲಾ ವಿಭಾಗ ಶೇ.97.59 ಫಲಿತಾಂಶದೊಂದಿಗೆ ಅತ್ಯುತ್ತಮ ಸಾಧನೆ ಮಾಡಿದೆ.

ಪರೀಕ್ಷೆಗೆ ಹಾಜರಾಗಿದ್ದ 83 ವಿದ್ಯಾರ್ಥಿಗಳಲ್ಲಿ 81 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಅತ್ಯುತ್ತಮ ಶ್ರೇಣಿಯಲ್ಲಿ 7, ಪ್ರಥಮ ಶ್ರೇಣಿಯಲ್ಲಿ 46, ದ್ವಿತೀಯ ಶ್ರೇಣಿಯಲ್ಲಿ 17 ಹಾಗೂ ತೃತೀಯ ಶ್ರೇಣಿಯಲ್ಲಿ 11 ವಿದ್ಯಾರ್ಥಿಗಳು ತೇರ್ಗಡೆಯಾಗುವ ಮೂಲಕ ಶಾಲೆ, ಸಂಸ್ಥೆ ಹಾಗೂ ಆಲಮಟ್ಟಿ ಗ್ರಾಮಕ್ಕೆ ಕೀರ್ತಿ ತಂದಿದ್ದಾರೆ.

ಈ ಬಾರಿಯೂ ಫಲಿತಾಂಶದಲ್ಲಿ ಬಾಲಕಿಯರೇ ಮೇಲುಗೈ ಸಾಧಿಸಿದ್ದಾರೆ. ಶೇ.96.80 ಅಂಕ ಗಳಿಸಿ ಕುಮಾರಿ ಸಂಜನಾ ದಳವಾಯಿ ಶಾಲೆಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ಕುಮಾರಿ ತನುಶ್ರೀ ಧನವೆ ಶೇ.93.12 ಅಂಕಗಳೊಂದಿಗೆ ದ್ವಿತೀಯ, ಕುಮಾರಿ ಸುಂದರಮ್ಮ ಬಡಿಗೇರ ಶೇ.92.80 ಅಂಕಗಳೊಂದಿಗೆ ತೃತೀಯ ಹಾಗೂ ಕುಮಾರಿ ರತ್ನಾ ಜಲ್ಲಿ ಶೇ.90.40 ಅಂಕಗಳೊಂದಿಗೆ ಚತುರ್ಥ ಸ್ಥಾನ ಪಡೆದಿದ್ದಾರೆ. ಶಾಲೆಯ ಟಾಪರ್‌ಗಳೆಲ್ಲ ಬಾಲಕಿಯರೇ ಎಂಬುದು ವಿಶೇಷ.

ಹಿಂದಿ ವಿಷಯದಲ್ಲಿ ತನುಶ್ರೀ ಧನವೆ ಹಾಗೂ ಗೋಪಾಲ ಮನಗೂಳಿ 100ಕ್ಕೆ 100 ಅಂಕ ಪಡೆದು ಗಮನ ಸೆಳೆದಿದ್ದಾರೆ. ಕರುನಾಡು ಗಾಂಧಿ ಹರ್ಡೇಕರ ಮಂಜಪ್ಪ ಅವರ ಹೆಸರಿನಲ್ಲಿ ನಡೆಯುತ್ತಿರುವ ಐತಿಹಾಸಿಕ ಹಿನ್ನೆಲೆಯ ಈ ಶಾಲೆಯ ಫಲಿತಾಂಶ ಜಿಲ್ಲೆಯಲ್ಲಿಯೇ ಅತ್ಯುತ್ತಮವಾಗಿದೆ.

ಮುಖ್ಯ ಶಿಕ್ಷಕ ಎಸ್.ಐ. ಗಿಡ್ಡಪ್ಪಗೋಳ ಮಾತನಾಡಿ, "ಲಿಂ. ತೋಂಟದ ಡಾ. ಸಿದ್ದಲಿಂಗ ಮಹಾಸ್ವಾಮಿಗಳ ಕನಸನ್ನು ಸಂಸ್ಥೆಯ ಕಾರ್ಯದರ್ಶಿ ಪ್ರೊ. ಶಿವಾನಂದ ಪಟ್ಟಣಶೆಟ್ಟರ ಅವರು ನನಸು ಮಾಡಿದ್ದಾರೆ. ಹೈಟೆಕ್ ಮಾದರಿಯಲ್ಲಿ ಸುಸಜ್ಜಿತ ಕಟ್ಟಡ, 50 ಎಕರೆಗೂ ಹೆಚ್ಚು ವಿಸ್ತೀರ್ಣದ ಕಾಂಪೌಂಡ್ ನಿರ್ಮಿಸಿ ಗ್ರಾಮೀಣ ಮಕ್ಕಳಿಗೆ ಅನುಕೂಲ ಕಲ್ಪಿಸಿದ್ದಾರೆ. ಈಗಿನ ಪೀಠಾಧ್ಯಕ್ಷ ತೋಂಟದ ಡಾ. ಸಿದ್ದರಾಮ ಮಹಾಸ್ವಾಮಿಗಳು ಸಹ ಲಿಂ. ಶ್ರೀಗಳ ಕನಸುಗಳನ್ನು ಮುಂದುವ–ರಿಸುತ್ತಿದ್ದಾರೆ" ಎಂದರು.

ಅತ್ಯುತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳು ಹಾಗೂ ಶಿಕ್ಷಕ ಬಳಗಕ್ಕೆ ತೋಂಟದ ಡಾ. ಸಿದ್ದರಾಮ ಮಹಾಸ್ವಾಮಿಗಳು, ಕಾರ್ಯದರ್ಶಿ ಪ್ರೊ. ಶಿವಾನಂದ ಪಟ್ಟಣಶೆಟ್ಟರ, ಮುಖ್ಯೋಪಾಧ್ಯಾಯ ಎಸ್.ಐ. ಗಿಡ್ಡಪ್ಪಗೋಳ, ಸಿಬ್ಬಂದಿ, ಪಾಲಕರು ಅಭಿನಂದನೆ ಸಲ್ಲಿಸಿದ್ದಾರೆ.

**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR